# ಪರಿಸರ ಅಧ್ಯಯನ

# ENVIRONMENTAL SCIENCE

## ಭಾಗ - 2

## PART - 2

## ತರಗತಿ - IV

ಕೇರಳ ಸರಕಾರ

ಶಿಕ್ಷಣ ಇಲಾಖೆ

*ತಯಾರಿಸಿದವರು*

**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ**

**2015**

JT 595-1/EVS 4(K) (Vol-2)

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ಬಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಶ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

---

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು. ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

---

*Prepared by:*
**State Council of Educational Research and Training (SCERT)**
Poojappura, Thiruvananthapuram 695012, Kerala
*Website* : www.scertkerala.gov.in, *e-mail* : scertkerala@gmail.com
Phone : 0471 - 2341883, Fax : 0471 - 2341869
Typesetting and Layout : SCERT
Printed at : KBPS, Kakkanad, Kochi-30
© Department of Education, Government of Kerala



ಪ್ರೀತಿಯ ಪುಟಾಣಿಗಳೇ,

ನಾವೊಂದು ಪ್ರವಾಸಕ್ಕೆ ಅಣಿಯಾಗೋಣ.....
ದಾರಿಯುದ್ದಕ್ಕೂ ಅನೇಕ ಗಿಡಗಳು, ಪಕ್ಷಿಗಳು
ಕಥೆ ಹೇಳುವ ಗುಡ್ಡಗಳು, ಕಲ್ಲು, ಮಣ್ಣು.
ಆಕಾಶದಲ್ಲಿ ಚಂದಿರಮಾಮ!
ಬೆಳದಿಂಗಳ ಕಾಂತಿ, ಕಾಮನಬಿಲ್ಲು ಮೂಡುವ ಆಕಾಶ
ಏನೆಲ್ಲಾ ಇವೆ ನಮ್ಮ ಸುತ್ತಮುತ್ತಲು!
ಪ್ರಕೃತಿ ಕೌತುಕದ ಗ್ರಂಥವಾಗಿದೆ.
ಅವುಗಳಿಂದ ಜ್ಞಾನದ ಜೇನನ್ನು ಹೀರಿ ಆನಂದಿಸಲು
ನಿಮ್ಮ ಸಹಾಯಕವಾಗಿ
ಈ ಪುಸ್ತಕವಿದೆ.
ಕೈ ಹಿಡಿದು ಜೊತೆಯಾಗಿ ಬನ್ನಿ.

ಪ್ರೀತಿಪೂರ್ವಕ,

**ಡಾ. ಎಸ್. ರವೀಂದ್ರನ್ ನಾಯರ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.



# TEXT BOOK DEVELOPMENT TEAM

## PARTICIPANTS

**Vishwambharan K.R.**
Sr. Lecturer, DIET, Alappuzha

**Rajesh Kumar T.**
GUPS Thekkil West, Kasaragod

**Shashikumar P.V.**
ALPS Mathoor West
(Banglav School), Palakkad

**Ajithprasad N.R.**
Hindu L.P. School, Mullassery, Thrissur

**Jahangeer Kabeer T.P.**
Feroke College, LPS Kozhikod

**Biju Mathew**
GHSS, Kadungapuram, Malappuram

**Eassa V.K.**
AMLPS, Veettikkad, Paral
Perundalmanna

**M. Santhosh Kumar**
BRC Agali, Palakkad

**Sreejith Ashok**
GLPGS, North Paravoor, Ernakulam

**Rojas Martin**
GHSS Agali, Palakkad

**Sajeev Kumar P.R.**
Govt. TTI Kollam

**H.A. Saleem**
GUPS Kumaranjira, Shasthankota

## EXPERTS

**Dr. T. Neelakantan**
Principal
M.M.S. Govt. Arts & Science
College, Malayinkizh

**V.S. Anil Kumar**
Asst. Prof. Govt. College, Kottayam

**Dr. Sagar S.**
Asst. Prof. Govt. Women's College
Thiruvananthapuram

**Dr. Vijayan Chalot**
DPO, SSA Kannur

**Sinitha G.S.**
Asst. Prof. University College
Thiruvananthapuram

**Dr. Augustin George**
Asst. Prof. (Physical Education)
Govt. Medical College
Kottayam

## ARTISTS

**N.T. Rajeevan,** GHS, Thariyot, Waynad
**Santhosh Veliyannoor**

## ACADEMIC CO-ORDINATOR

**Dr. Chithra Vijayan**
Reserch Offiicer, SCERT

## KANNADA VERSION

### PARTICIPANTS

**Durgaparameshwari P.**, GHSS Shiriya
**Dasappa K.**, GHSS Bellur
**Kirana Shankara K.S.**, VALPS Ukkinadka

### LANGUAGE EXPERT


**Dr. Rathnakara Mallamoole**
Asst. Prof. Govt. College,
Kasaragod

## CO-ORDINATOR

**Dr. Faisal Mavulladathil**
Reserch Officer, SCERT

**State Council of Educational Reserch and Training (SCERT)**
Vidyabhavan, Poojappura, Thiruvananthapuram-695012

# ಅನುಕ್ರಮಣಿಕೆ





ಕಲ್ಲಾಗಿ... ಕಡಲಾಗಿ... .................................... 71

ಓದೋಣ ರಚಿಸೋಣ .................................... 85

ಭಾರತದೆಡೆಗೆ .................................... 97

ಕಣ್ಣಿಗೆ ನಿಲುಕದ....ಕೈಗೆ ಎಟುಕದ....
ದೂರದಲ್ಲಿ .................................... 107

ಗೆಳೆಯರಿಗೊಂದು ಮುಂಜಾಗ್ರತೆ .................. 117

ನಾಡನ್ನು ಅರಿಯಲು .................................... 128

**ಅನುಕೂಲಕ್ಕಾಗಿ ಕೆಲವು ಸಂಕೇತಗಳನ್ನು**
**ಈ ಪುಸ್ತಕದಲ್ಲಿ ಉಪಯೋಗಿಸಲಾಗಿದೆ.**


ಹೆಚ್ಚಿನ ಕಲಿಕೆಗಾಗಿ
(ಮೌಲ್ಯಮಾಪನಕ್ಕೆ ಒಳಪಡಿಸಬೇಕೆಂದಿಲ್ಲ)


ಕಲಿಕೆಯ ಪ್ರಧಾನ ಸಾಧನೆಗಳು


ಮೌಲ್ಯಮಾಪನ ಮಾಡೋಣ


ಮುಂದುವರಿದ ಚಟುವಟಿಕೆಗಳು

# 7

# ಕಲ್ಲಾಗಿ... ಕಡಲಾಗಿ...

ಅಮಲ್ ಮತ್ತು ಗೆಳೆಯರು ಶಾಲೆಯ ಹೂದೋಟಕ್ಕೆ ನೀರುಣಿಸುತ್ತಿದ್ದರು. ಬಾಲ್ದಿಯಲ್ಲಿ ತುಂಬಿಸಿದ ನೀರಿನಲ್ಲಿ ಅಮಲ್ ದೊಡ್ಡ ಲೋಟವನ್ನು ಮುಳುಗಿಸಿದನು. ಆಗ ನೀರು ಹೊರಚೆಲ್ಲಿತು.

ಶ್ರೇಯ : ಏನಿದು? ಒಂದು ಹನಿ ನೀರನ್ನೂ ಪೋಲು ಮಾಡಬಾರದೆಂದು ತಿಳಿಯದೇ?

ಅಮಲ್ : ನಾನು ಚೆಲ್ಲಲಿಲ್ಲ, ಲೋಟವನ್ನು ಮುಳುಗಿಸಿದಾಗ ನೀರು ಹೊರಚೆಲ್ಲಿತು.

ಶ್ರೇಯ : ಹೌದೇ, ಹೀಗೆ ನೀರು ಹೊರಚೆಲ್ಲಲು ಕಾರಣವೇನು? ಅದನ್ನೊಮ್ಮೆ ಪ್ರಯೋಗ ಮಾಡಿ ನೋಡೋಣವೇ?

ಅಮಲ್, ಸುಬಿನ್ ಮತ್ತು ಶ್ರೇಯ ಆ ಪ್ರಯೋಗವನ್ನು ಮಾಡಲು ಸಿದ್ಧರಾಗುತ್ತಿರುವರು. ಅಲ್ಲಿ ನೀರನ್ನು ತುಂಬಿಸಿದ ಬಾಲ್ದಿಯ ಸಮೀಪವೇ ಇಟ್ಟಿಗೆ, ಕಲ್ಲು, ಮರದ ತುಂಡು, ಕಬ್ಬಿಣದ ತುಂಡು ಎಂಬಿವುಗಳನ್ನು ಇರಿಸಲಾಗಿದೆ. ಆಗ ಲೀನ ಅಲ್ಲಿಗೆ ಬಂದಳು. ಅವಳು ಕುತೂಹಲದಿಂದ ಪ್ರಶ್ನಿಸಿದಳು: "ನೀವೇನು ಮಾಡುತ್ತಿರುವಿರಿ?"



ಸುಬಿನ್ : ಬಾಲ್ದಿಯಲ್ಲಿರುವ ನೀರಿಗೆ ಒಂದೊಂದು ವಸ್ತುಗಳನ್ನು ಹಾಕಿ ನೋಡುತ್ತಿದ್ದೇವೆ. ಪೂರ್ಣವಾಗಿ ನೀರು ತುಂಬಿರುವ ಪಾತ್ರೆಗೆ ಯಾವ ವಸ್ತುವನ್ನು ಹಾಕಿದರೂ ನೀರು ಹೊರಚೆಲ್ಲುತ್ತದೆ.

ಅಮಲ್ : ಇಲ್ಲಿರುವ ಯಾವ ವಸ್ತುವನ್ನು ಬಾಲ್ದಿಗೆ ಹಾಕುವಾಗ ಹೆಚ್ಚು ನೀರು ಹೊರಚೆಲ್ಲುವುದು? ಲೀನಾ ಹೇಳುವೆಯಾ?

ನೀವು ಊಹಿಸುವಿರಾ?

ಈ ಪ್ರಯೋಗವನ್ನು ಮಾಡಿ ನೋಡಿರಿ. ಕಂಡುಹಿಡಿದ ವಿಚಾರಗಳನ್ನು ಬರೆಯಿರಿ.


**ಪ್ರತಿಯೊಂದು ವಸ್ತುವಿಗೆ ಇರಲು ಸ್ಥಳ ಬೇಕು.**

ಹೆಚ್ಚು ಗಾತ್ರದ ವಸ್ತುಗಳಿಗೋ?

## ಆಕಾರ ಇರುವವುಗಳು ಮತ್ತು ಇಲ್ಲದವುಗಳು

ಒಂದು ಲೋಟದಲ್ಲಿ ನೀರನ್ನು ತೆಗೆದುಕೊಳ್ಳಿರಿ. ಈಗ ನೀರಿಗೆ ಯಾವ ಆಕಾರವಿದೆ?

ಈ ನೀರನ್ನು ವಿಭಿನ್ನ ಆಕಾರದ ಪಾತ್ರೆಗಳಲ್ಲಿ ಎರೆದು ನೋಡಿರಿ.



ನೀರಿನ ಆಕಾರದಲ್ಲಿ ಯಾವ ಬದಲಾವಣೆ ಉಂಟಾಯಿತು?

ಇದಕ್ಕೆ ಕಾರಣವೇನಿರಬಹುದು?

**ನೀರಿಗೆ ನಿರ್ದಿಷ್ಟ ಆಕಾರವಿಲ್ಲ. ಅದು ಒಳಗೊಂಡಿರುವ ಪಾತ್ರೆಯ ಆಕಾರವನ್ನು ಹೊಂದುವುದು.**

ಆದರೆ ಕಲ್ಲೋ?

ಬಾಟಲಿಗೆ ನೀರನ್ನು ಎರೆಯಲು ಸಾಧ್ಯವಾಗುವುದಲ್ಲವೇ?

ಬಾಟಲಿಯ ಬಾಯಿಯ ಅಳತೆಗಿಂತ ದೊಡ್ಡ ಕಲ್ಲನ್ನು ಬಾಟಲಿಯ ಒಳಗೆ ಹಾಕಲು ಸಾಧ್ಯವಾಗುವುದೇ? ಯಾಕೆ?

ಇದರಿಂದ ನೀವೇನು ತಿಳಿದುಕೊಳ್ಳುವಿರಿ?

**ಕಲ್ಲಿಗೆ ಆಕಾರ ಮತ್ತು ಗಾತ್ರವಿದೆ.**

## ಭಾರವನ್ನು ಅಳೆಯೋಣ

ನಿಮ್ಮ ಶಾಲಾಬ್ಯಾಗಿನ ಭಾರವನ್ನು ತೂಗಿ ನೋಡಿರಿ.

ನೀವು ನೀರು ತೆಗೆದುಕೊಂಡು ಬರುವ ಬಾಟಲಿಯ ಭಾರವನ್ನು ನೀರನ್ನು ತುಂಬಿಸುವ ಮೊದಲು ಮತ್ತು ತುಂಬಿಸಿದ ಬಳಿಕ ಕಂಡುಹಿಡಿಯಿರಿ.

ಯಾವ ವ್ಯತ್ಯಾಸ ಕಂಡುಬಂದಿತು? ಇದರಿಂದ ನೀವೇನು ತಿಳಿಯುವಿರಿ?

**ಎಲ್ಲಾ ವಸ್ತುಗಳಿಗೂ ಭಾರವಿದೆ**

ಇದರಂತೆ ಬಾಲ್ದಿ, ಕೊಡಪಾನ ಎಂಬಿವುಗಳಲ್ಲಿರುವ ನೀರಿನ ಭಾರವನ್ನು ಕಂಡುಹಿಡಿಯಿರಿ.

## ಬಲಶಾಲಿ

ಚಿತ್ರವನ್ನು ಗಮನಿಸಿದಿರಲ್ಲವೇ.

ಜಲಚಕ್ರ ತಿರುಗುವುದು ಯಾಕೆ?






**ಹರಿಯುವ ನೀರಿಗೆ ಬಲವಿದೆ**

ಚಿತ್ರವನ್ನು ನೋಡಿರಿ... ನೀರಿನಂತೆ ಪ್ರವಹಿಸುವವುಗಳು ಯಾವುವು?

ಅವುಗಳಿಗೆ ಬಣ್ಣ ಹಚ್ಚಿರಿ.




ನೀರು ಮತ್ತು ನೀರಿನ ಗೆಳೆಯರು ದ್ರವಗಳಾಗಿವೆ.

ಇವುಗಳಲ್ಲದೆ ಇತರ ದ್ರವಗಳನ್ನು ಕಂಡುಹಿಡಿಯಿರಿ. ದ್ರವಗಳ ಸಾಮಾನ್ಯ ಗುಣಗಳನ್ನು ಬರೆಯಿರಿ.

## ಬದಲಾಗುವ ಸ್ಥಿತಿ


ಒಂದು ಪಾತ್ರೆಯಲ್ಲಿ ಸ್ವಲ್ಪ ನೀರನ್ನು ತೆಗೆದುಕೊಂಡು ಬಿಸಿಮಾಡಿ ನೋಡಿರಿ. ಆಗ ಅದರಿಂದ ನೀರಾವಿ ಮೇಲೇರುವುದನ್ನು ಕಾಣಬಹುದಲ್ಲವೇ? ಒಂದು ಅಗಲವಾದ ಪಾತ್ರೆಯಲ್ಲಿ ನೀರೆರೆದು ನೀರಾವಿಯ ಮೇಲೆ ಹಿಡಿಯಿರಿ. ಪಾತ್ರೆಯ ಅಡಿಭಾಗದಲ್ಲಿ ಏನು ಕಂಡುಬರುವುದು? ಇದಕ್ಕೆ ಕಾರಣವೇನು?



ಹೀಗೆ ನೀರಾವಿ ತಣಿದು ನೀರಾಗಿ ಬದಲಾಗುವ ಇತರ ಸಂದರ್ಭಗಳನ್ನು ನಿಮಗೆ ಕಂಡುಹಿಡಿಯಬಹುದೇ?

**ನೀರಾವಿ ತಣಿದಾಗ ನೀರಾಗುವುದು.**

ನೀರನ್ನು ಪುನಃ ತಣಿಸಿದರೆ ಯಾವ ಬದಲಾವಣೆ ಉಂಟಾಗುವುದು?




## ವಾಯುವಿನಲ್ಲೂ ನೀರು!

ಒಂದು ಗ್ಲಾಸನ್ನು ತೆಗೆದುಕೊಳ್ಳಿರಿ. ಅದರಲ್ಲಿ ಕೆಲವು ಮಂಜುಗಡ್ಡೆಯ ತುಂಡುಗಳನ್ನು ಹಾಕಿರಿ.

ಗ್ಲಾಸಿನ ಹೊರಭಾಗವನ್ನು ನಿರೀಕ್ಷಣೆ ಮಾಡಿರಿ.
ಏನು ಕಂಡುಬರುವುದು?

ನೀರಿನ ಹನಿಗಳು ಎಲ್ಲಿಂದ ಬಂದುವು?

ಗ್ಲಾಸಿನ ಹೊರಗೆ ವಾಯು ಮಾತ್ರ ಇರುವುದಲ್ಲವೇ?

ಹಾಗಾದರೆ ನೀರಿನ ಹನಿಗಳು ಉಂಟಾದುದು ಹೇಗೆ?



**ನೀರಾವಿ ತಣಿದು ನೀರಾಗುವುದು.**

## ಕಲ್ಲಿನ ಗೆಳೆಯರು

ಕಲ್ಲಿಗೆ ಆಕಾರ, ಗಾತ್ರ ಮತ್ತು ಭಾರವಿದೆಯೆಂದು ನೋಡಿದೆವಲ್ಲವೇ?

ಯಾವುದಾದರೂ ಒಂದು ಪಾತ್ರೆಯಲ್ಲಿ ಮಾತ್ರ ದ್ರವವನ್ನು ತೆಗೆದುಕೊಳ್ಳಲು ಸಾಧ್ಯ. ಆದರೆ ಕಲ್ಲು, ಮರದ ತುಂಡು ಮೊದಲಾದವುಗಳನ್ನು ತೆಗೆದುಕೊಳ್ಳುವಾಗಲೋ?

ನೀರು ಮತ್ತು ಕಲ್ಲುಗಳೊಳಗಿನ ವ್ಯತ್ಯಾಸವೇನು?

ಕಲ್ಲು, ಮರದ ತುಂಡು ಮೊದಲಾದವುಗಳು ಘನವಸ್ತುಗಳಾಗಿವೆ.

ಇತರ ಘನವಸ್ತುಗಳ ಹೆಸರು ಬರೆಯಬಹುದೇ? ಘನವಸ್ತುಗಳ ಸಾಮಾನ್ಯ ಗುಣಗಳನ್ನು ಬರೆಯಿರಿ.

ದ್ರವಗಳಿಗಿಂತ ಭಿನ್ನವಾಗಿ ಘನವಸ್ತುಗಳಿಗಿರುವ ಪ್ರತ್ಯೇಕತೆಗಳು ಯಾವುವು? ಅವುಗಳ ನಡುವಿನ ಸಾಮ್ಯಗಳು ಯಾವುವು?

ಸಾಮ್ಯ ವ್ಯತ್ಯಾಸಗಳನ್ನು ಬರೆಯಿರಿ.

| ಘನವಸ್ತುಗಳು | ದ್ರವವಸ್ತುಗಳು |
|---|---|
| ________ | ಪ್ರವಹಿಸುವುದು |
| ಭಾರವಿದೆ | ________ |
| ________ | ________ |

## ವಾಯುವಿನ ವೈಶಿಷ್ಟ್ಯಗಳು

ಇಂದು ಸುಬಿನ್ ಬಹಳ ಸಂತೋಷದಲ್ಲಿರುವನು. ಅವನು ತಯಾರಿಸಿದ ಬೆಲೂನ್‌ಬೋಟನ್ನು ಗೆಳೆಯರಿಗೆ ತೋರಿಸಲು ಕಾಯುತ್ತಿರುವನು.

ನೀರಿನಲ್ಲಿ ಓಡುವ ಬೆಲೂನ್‌ಬೋಟ್... ಹಾಯ್! ಗೆಳೆಯರಿಗೆ ಕುತೂಹಲವಾಯಿತು.



ಅಮಲ್ : ಸುಬಿನ್... ಇದನ್ನು ಹೇಗೆ ತಯಾರಿಸಿದೆ ?


ಸುಬಿನ್ : ಸಾಬೂನು ಪೆಟ್ಟಿಗೆಯ ಮುಚ್ಚಳದ ಒಂದು ಬದಿಯಲ್ಲಿ ಕೆಳಗೆ ಒಂದು ರಂಧ್ರವನ್ನು ಮಾಡಬೇಕು. ಸ್ಟ್ರಾದ ತುದಿಯಲ್ಲಿ ಬೆಲೂನ್ ಕಟ್ಟಬೇಕು. ಸ್ಟ್ರಾದ ಮತ್ತೊಂದು ತುದಿಯನ್ನು ಸಾಬೂನು ಪೆಟ್ಟಿಗೆಯಲ್ಲಿರುವ ರಂಧ್ರದ ಮೂಲಕ ಹೊರಭಾಗಕ್ಕೆ ತರಬೇಕು. ಸ್ಟ್ರಾದ ಮೂಲಕ ಊದಿ ಬೆಲೂನನ್ನು ಉಬ್ಬಿಸಬೇಕು. ವಾಯು ಹೊರಹೋಗದಂತೆ ಬೆರಳುಗಳಿಂದ ಒತ್ತಿ ಹಿಡಿಯಬೇಕು. ಒಂದು ದೊಡ್ಡ ಅಗಲವಾದ ಪಾತ್ರೆಯಲ್ಲಿರುವ ನೀರಿನಲ್ಲಿ ಸ್ಟ್ರಾದ ತುದಿಯು ಮುಳುಗಿರುವಂತೆ ಬೆಲೂನ್ ಬೋಟನ್ನಿಟ್ಟು ಮೆಲ್ಲಗೆ ಕೈ ಬಿಡಿರಿ... ಬೆಲೂನ್ ಬೋಟ್ ಫಕ್ಕನೆ ಮುಂದಕ್ಕೆ ಚಲಿಸುವುದನ್ನು ಕಂಡಿರಲ್ಲವೇ !







ಲೀನ : ನಾನು ಮತ್ತೊಂದು ಮ್ಯಾಜಿಕ್ ತೋರಿಸುತ್ತೇನೆ. ಇದು ಬೆಲೂನ್ ರೋಕೆಟ್. ಇದನ್ನು ತಯಾರಿಸುವುದು ಹೇಗೆಂದು ತಿಳಿಯಬೇಡವೇ?



ಒಂದು ಸ್ಟ್ರಾದ ತುಂಡಿನ ಮೂಲಕ ಉದ್ದವಾದ ನೂಲನ್ನು ಹಾಯಿಸಿರಿ. ಚಿತ್ರದಲ್ಲಿ ಕಾಣುವಂತೆ ಎರಡು ತುದಿಗಳನ್ನು ಎಳೆದು ಕಟ್ಟಿರಿ. ದೊಡ್ಡದೊಂದು ಬೆಲೂನನ್ನು ಉಬ್ಬಿಸಿ ಅದರ ಮಧ್ಯ ಭಾಗವನ್ನು ಸೆಲ್ಲೋಟೇಪಿನಿಂದ ಸ್ಟ್ರಾಗೆ ಅಂಟಿಸಿರಿ. ಬೆಲೂನನ್ನು ನೂಲಿನ ತಗ್ಗಾಗಿರುವ ತುದಿಗೆ ತಂದ ಬಳಿಕ ಕೈ ಬಿಟ್ಟು ನೋಡಿರಿ.

*ಗೆಳೆಯರೇ... ನೀವೂ ಬೆಲೂನ್‌ಬೋಟ್ ಮತ್ತು ರೋಕೆಟ್ ತಯಾರಿಸುವಿರಲ್ಲವೇ?*

ವಾಯು ಹೊರಗೆ ಹೋದಾಗ ಬೆಲೂನು ಯಾವ ಭಾಗಕ್ಕೆ ಓಡಿ ಹೋಯಿತು? ಯಾಕೆ?

## ಹಲವು ಆಕಾರ

ಹಲವು ಆಕಾರ ಮತ್ತು ಗಾತ್ರದಲ್ಲಿರುವ ಬೆಲೂನು ಬೊಂಬೆಗಳನ್ನು ಊದಿ ಉಬ್ಬಿಸಿ ನೋಡಿರಿ. ಬಳಿಕ ವಾಯುವನ್ನು ತೆರೆದು ಬಿಡಿರಿ. ಏನು ಸಂಭವಿಸುವುದು?

ಹೀಗಾಗಲು ಕಾರಣವೇನು?



- ಹಲವು ಆಕಾರದಲ್ಲಿರುವ ಬೆಲೂನುಗಳಲ್ಲಿ ವಾಯು ತುಂಬಿಸಿದಾಗ ಕಂಡುಬಂದ ಬದಲಾವಣೆಗಳು ಯಾವುವು?
- ವಾಯುವಿಗೆ ನಿರ್ದಿಷ್ಟ ಆಕಾರವಿದೆಯೇ?

ನೀವು ಕಂಡುಹಿಡಿದ ವಿಚಾರಗಳನ್ನು ಪರಿಸರಪುಸ್ತಕದಲ್ಲಿ ಬರೆಯಿರಿ.

## ಅಡಗಿರುವುದು ಯಾರು?

ಎರಡು ಗ್ಲಾಸುಗಳನ್ನು ತೆಗೆದುಕೊಳ್ಳಿರಿ. ಪ್ರತಿಯೊಂದರ ಒಳಗೆ ಅರ್ಧದ ವರೆಗೆ ಕಾಗದಗಳನ್ನು ಚೆನ್ನಾಗಿ ಒತ್ತಿ ಇರಿಸಿರಿ. ಎರಡನೆಯ ಗ್ಲಾಸಿನೊಳಗೆ ಒಂದು ಸ್ಟ್ರಾವನ್ನು ಸೆಲ್ಲೋಟೇಪಿನಿಂದ ಅಂಟಿಸಿರಿ. ಎರಡು ಗ್ಲಾಸುಗಳನ್ನು ಒಂದು ಬಾಲ್ದಿಯಲ್ಲಿರುವ ನೀರಿನಲ್ಲಿ ಮುಳುಗಿಸಿ ನೋಡಿರಿ.

- ಎರಡನೆಯ ಗ್ಲಾಸಿನಿಂದ ಹೊರಗೆ ಬರುತ್ತಿರುವುದೇನು?


  ಇನ್ನು ಎರಡು ಗ್ಲಾಸುಗಳ ಒಳಗಿರುವ ಕಾಗದಗಳನ್ನು ಪರಿಶೀಲಿಸಿರಿ...

  ನೀವು ಮಾಡಿದ ಪ್ರಯೋಗದ ಟಿಪ್ಪಣಿ ತಯಾರಿಸಿರಿ.









## ಲೀನಳ ಪ್ರಯೋಗ ಟಿಪ್ಪಣಿ

### ಒದ್ದೆಯಾಗಿಯೂ ಒದ್ದೆಯಾಗದೆಯೂ

**ಉದ್ದೇಶ** :ವಾಯುವಿಗೆ ಇರಲು ಸ್ಥಳ ಅಗತ್ಯವೇ ಎಂಬುದನ್ನು ಕಂಡುಹಿಡಿಯಲು.

**ಸಾಮಗ್ರಿಗಳು** :ನೀರು ತುಂಬಿದ ಬಾಲ್ದಿ, ಎರಡು ಗ್ಲಾಸುಗಳು, ಬಾಗುವ ಸ್ಟ್ರಾ, ಕಾಗದ, ಸೆಲ್ಲೋಟೇಪ್.

**ಪ್ರಯೋಗ ವಿಧಾನ** :ಮುಕ್ಕಾಲು ಭಾಗ ನೀರು ತುಂಬಿದ ಬಾಲ್ದಿಯನ್ನು ತೆಗೆದುಕೊಂಡು ಎರಡು ಗ್ಲಾಸುಗಳಲ್ಲಿ ಪ್ರತಿಯೊಂದರಲ್ಲಿ ಅರ್ಧದಷ್ಟು ಭಾಗದಲ್ಲಿ ಕಾಗದವನ್ನು ಚೆನ್ನಾಗಿ ಒತ್ತಿ ಇರಿಸಿದೆನು. ಎರಡನೆಯ ಗ್ಲಾಸಿನಲ್ಲಿ ಬಾಗುವ ಒಂದು ಸ್ಟ್ರಾದ ಉದ್ದ ಕಡಿಮೆಯಿರುವ ಭಾಗ ಗ್ಲಾಸಿನ ಒಳಭಾಗದಲ್ಲಿ ಬರುವಂತೆ ಸೆಲ್ಲೋಟೇಪಿನಿಂದ ಅಂಟಿಸಿದೆನು. ಎರಡು ಗ್ಲಾಸುಗಳನ್ನೂ ನೇರವಾಗಿ ಕವುಚಿಹಿಡಿದು ಬಾಲ್ದಿಯಲ್ಲಿರುವ ನೀರಿನಲ್ಲಿ ಮುಳುಗಿಸಿದೆನು.

**ನಿರೀಕ್ಷಣಾ ಫಲಿತಾಂಶ** :ಗ್ಲಾಸುಗಳನ್ನು ನೀರಿನಲ್ಲಿ ಮುಳುಗಿಸುವಾಗ ಒಂದನೆಯ ಗ್ಲಾಸನ್ನು ಹೆಚ್ಚು ಬಲ ಪ್ರಯೋಗಿಸಿ ಒತ್ತಬೇಕಾಯಿತು. ಗ್ಲಾಸಿನ ಒಳಗೆ ಸ್ವಲ್ಪ ಮಾತ್ರ ನೀರು ಏರಿತು. ಎರಡನೆಯ ಗ್ಲಾಸಿನ ಸ್ಟ್ರಾದ ಮೂಲಕ ವಾಯುವಿನ ಗುಳ್ಳೆಗಳು ಹೊರಗೆ ಬರುವುದನ್ನು ಕಂಡೆನು. ಆಗ ಗ್ಲಾಸಿನೊಳಗೆ ಹೆಚ್ಚು ನೀರು ಏರಿತು. ಒಂದನೆಯ ಗ್ಲಾಸಿನಿಂದ ಕಾಗದವನ್ನು ಹೊರಗೆ ತೆಗೆದಾಗ ಒದ್ದೆಯಾಗಿರಲಿಲ್ಲ. ಎರಡನೆಯ ಗ್ಲಾಸಿನಲ್ಲಿರುವ ಕಾಗದ ಒದ್ದೆಯಾಗಿತ್ತು.

**ನಿಗಮನ** :

ನಿಗಮನವನ್ನು ದಾಖಲಿಸಿದಿರಲ್ಲವೇ?

## ಪರಿಮಳ ತಲುಪುವಾಗ

ಮಲ್ಲಿಗೆ ಅರಳಿದಾಗ ಮತ್ತು ಸೆಂಟಿನ ಬಾಟಲಿಯ ಮುಚ್ಚಳ ತೆರೆದಾಗ ನಾವು ದೂರದಿಂದಲೇ ತಿಳಿಯುವೆವಲ್ಲವೇ?



ಇದು ಹೇಗೆ ಸಾಧ್ಯವಾಗುವುದು? ನಾವು ನೋಡೋಣವೇ?

ಅಗರ್‌ಬತ್ತಿಯ ಹೊಗೆಯನ್ನು ಒಂದು ಗ್ಲಾಸಿನಲ್ಲಿ ಸಂಗ್ರಹಿಸಿ ಕಾರ್ಡ್‌ಬೋರ್ಡಿನಿಂದ ಮುಚ್ಚಿ ಇರಿಸಿರಿ.


ಕಾರ್ಡ್‌ಬೋರ್ಡನ್ನು ಮೇಲೆತ್ತುವಾಗ ಹೊಗೆ ಮೇಲಕ್ಕೆ ಬರುವುದಿಲ್ಲವೇ?

ಅಗರ್‌ಬತ್ತಿಯ ಪರಿಮಳ ನಿಮಗೆ ಅನುಭವವಾಯಿತೇ?

ಅಗರ್‌ಬತ್ತಿಯ ಪರಿಮಳ ಬೆರೆತ ವಾಯು ವ್ಯಾಪಿಸುವುದರಿಂದ ನಮ್ಮ ಮೂಗಿಗೆ ತಲುಪಿತಲ್ಲವೇ?

## ನನಗೂ ಭಾರವಿದೆ...

ಸಪೂರದ ಉದ್ದವಾದ ಕೋಲಿನ ಒಂದು ತುದಿಯಲ್ಲಿ ದೊಡ್ಡ ಬೆಲೂನನ್ನೂ ಮತ್ತೊಂದು ತುದಿಯಲ್ಲಿ ಕಾಗದದ ಗ್ಲಾಸನ್ನೂ ನೂಲಿನಲ್ಲಿ ಕಟ್ಟಿ ತೂಗಾಡಿಸಿರಿ. ಕೋಲಿನ ಮಧ್ಯಭಾಗದಲ್ಲಿ ಒಂದು ನೂಲನ್ನು ಕಟ್ಟಿ ತಕ್ಕಡಿಯಂತೆ ತೂಗಿಸಿರಿ.



ಕಾಗದದ ಗ್ಲಾಸಿನಲ್ಲಿ ಹೆಸರುಕಾಳುಗಳನ್ನು ಹಾಕಿ ಭಾರವನ್ನು ಸಮಾನವಾಗಿಸಿರಿ. ಇನ್ನು ಬೆಲೂನನ್ನು ಊದಿ ಉಬ್ಬಿಸಿರಿ. ಈಗ ತಕ್ಕಡಿಗೆ ಏನು ಸಂಭವಿಸುವುದು? ಇದಕ್ಕೆ ಕಾರಣವೇನು? ಎಷ್ಟು ಹೆಸರುಕಾಳುಗಳನ್ನು ಹಾಕಿದಾಗ ಬೆಲೂನು ಮೇಲೆ ಬಂದು ಭಾರ ಸಮಾನವಾಯಿತು? ನೀವು ಕಂಡುಹಿಡಿದ ವಿಚಾರಗಳನ್ನು ಪರಿಸರಪುಸ್ತಕದಲ್ಲಿ ಬರೆಯಿರಿ.

## ಗಾಳಿಯ ಬಲ



ಶ್ರೇಯಳ ಕೈಯಲ್ಲಿರುವ ಗಿರಿಗಿಟಿಯನ್ನು ನೋಡಿದಿರಲ್ಲವೇ...?

ಅದು ತಿರುಗುವುದು ಹೇಗಾಗಿರಬಹುದು?

ಗೆಳೆಯರೊಂದಿಗೆ ಚರ್ಚಿಸಿರಿ.

ಗಾಳಿಯೆಂದರೆ ಪ್ರವಹಿಸುವ ವಾಯುವಲ್ಲವೇ?

ವಾಯುವಿಗೆ ಬಲವಿದೆ.



ಗಾಳಿಯಂತ್ರ ಬಯಲು



ಹಾಯಿಹಡಗು

**ವಾಯು, ನೀರಾವಿ ಮೊದಲಾದವುಗಳು ಅನಿಲಗಳಾಗಿವೆ.**

ಅನಿಲಗಳ ವೈಶಿಷ್ಟ್ಯಗಳು ಯಾವುವು. ಬರೆಯಿರಿ...

- ಅನಿಲಕ್ಕೆ ಆಕಾರವಿಲ್ಲ.
- 



***ಪ್ಲಾಸ್ಮಾ***

*ಘನ, ದ್ರವ, ಅನಿಲ ಎಂಬಿವುಗಳಲ್ಲದೆ ಪದಾರ್ಥಕ್ಕೆ ಇತರ ಕೆಲವು ಸ್ಥಿತಿಗಳೂ ಇವೆ. ಅದರಲ್ಲೊಂದು **ಪ್ಲಾಸ್ಮಾ. ಬೆಂಕಿ, ಮಿಂಚು** ಎಂಬಿವುಗಳು ಪ್ಲಾಸ್ಮಾ ಸ್ಥಿತಿಯಲ್ಲಿವೆ.*

## ಪಟ್ಟಿಯನ್ನು ಪೂರ್ತಿಗೊಳಿಸೋಣ

| ವಸ್ತುಗಳು | ಸಾಮಾನ್ಯ ಗುಣಗಳು | | | |
|---|---|---|---|---|
| | ಭಾರ | ಆಕಾರ | ಇರಲು ಸ್ಥಳ | ಸ್ಥಿತಿ |
| ತೆಂಗಿನೆಣ್ಣೆ | ✓ | x | ✓ | ದ್ರವ |
| ಮೇಜು | | ✓ | ✓ | ಘನ |
| ವಾಯು | ✓ | | | ಅನಿಲ |
| ನೀರಾವಿ | | | | |
| ಹಾಲು | | | | |
| ಮಂಜುಗಡ್ಡೆ | | | | |
| | | | | |

ಪಟ್ಟಿಯಿಂದ ನೀವು ತಲುಪಿದ ನಿಗಮನಗಳನ್ನು ಬರೆಯಿರಿ.

ನಮ್ಮ ಸುತ್ತುಮುತ್ತಲಿರುವ ವಸ್ತುಗಳು ಸಾಮಾನ್ಯವಾಗಿ ಘನ, ದ್ರವ, ಅನಿಲ ಎಂಬೀ ಮೂರು ಸ್ಥಿತಿಗಳಲ್ಲಿ ಕಂಡುಬರುತ್ತವೆ.



## ಕಲಿಕೆಯ ಪ್ರಧಾನ ಸಾಧನೆಗಳು

- ಘನ ವಸ್ತುಗಳ ಸಾಮಾನ್ಯ ಗುಣಗಳನ್ನು ಹೇಳುತ್ತಾರೆ.
- ದ್ರವಗಳ ವೈಶಿಷ್ಟ್ಯಗಳನ್ನು ಕಂಡುಹಿಡಿದು ಹೇಳುತ್ತಾರೆ.
- ಅನಿಲಗಳ ವೈಶಿಷ್ಟ್ಯಗಳನ್ನು ಅರಿತುಕೊಂಡು ಹೇಳುತ್ತಾರೆ.
- ನೀರಿಗೆ ಮೂರು ಸ್ಥಿತಿಗಳಿವೆಯೆಂದು ತಿಳಿದುಕೊಂಡು ಹೇಳುತ್ತಾರೆ.
- ನೀರಿನ ಸ್ಥಿತಿ ಬದಲಾವಣೆಗಳನ್ನು ಸರಳ ಪ್ರಯೋಗಗಳ ಮೂಲಕ ವಿವರಿಸುವರು.
- ಘನ, ದ್ರವ, ಅನಿಲ ಎಂಬೀ ಮೂರು ಸ್ಥಿತಿಗಳಲ್ಲಿರುವ ವಸ್ತುಗಳ ಸಾಮಾನ್ಯ ಗುಣಗಳನ್ನು ಸರಳ ಪ್ರಯೋಗಗಳ ಮೂಲಕ ಸಾಬೀತುಪಡಿಸುತ್ತಾರೆ.
- ಸುತ್ತುಮುತ್ತಲಿರುವ ವಸ್ತುಗಳ ಸಾಮಾನ್ಯ ಗುಣಗಳನ್ನು ಕ್ರೋಡೀಕರಿಸಿ ಹೇಳುತ್ತಾರೆ.

## ಮೌಲ್ಯಮಾಪನ ಮಾಡೋಣ

- ಕೆಳಗೆ ಕೊಟ್ಟಿರುವ ವಸ್ತುಗಳನ್ನು ವರ್ಗೀಕರಿಸಿ ಬರೆಯಿರಿ.

  ನೀರು, ಪೆಟ್ರೋಲ್, ಸಕ್ಕರೆ, ಕರ್ಪೂರ, ಉಪ್ಪು, ಮರದ ತುಂಡು, ನೀರಾವಿ, ಹೊಗೆ, ಡೀಸೆಲ್, ತೆಂಗಿನೆಣ್ಣೆ.

- ನಿರ್ದಿಷ್ಟ ಆಕಾರವಿದೆ, ಇರಲು ಸ್ಥಳಬೇಕು, ಭಾರವಿದೆ. ಇದು ಯಾವ ಸ್ಥಿತಿಯಾಗಿರುವುದು?


  A. ಅನಿಲ  B. ದ್ರವ  C. ಘನ

- ನೀರಿನ ಮೂರು ಸ್ಥಿತಿಗಳನ್ನು ಸೂಚಿಸುವ ಗುಂಪನ್ನು ಕಂಡುಹಿಡಿಯಿರಿ.

  A. ಹಾಲು, ಮಜ್ಜಿಗೆ, ಮೊಸರು
  B. ಬಿಸಿನೀರು, ತಣ್ಣೀರು, ಗಂಜಿನೀರು
  C. ನೀರು, ಮಂಜುಗಡ್ಡೆ, ನೀರಾವಿ
  D. ಐಸ್‌ಕ್ರೀಂ, ಚಾ, ಜ್ಯೂಸ್

## ಮುಂದುವರಿದ ಚಟುವಟಿಕೆಗಳು

### 1. ಮುದುಡದ ಬೆಲೂನು




ನೀರು ತುಂಬಿಸಿದ ಬೆಲೂನನ್ನು ಬಾಟಲಿಗೆ ಸಿಕ್ಕಿಸಿ ಭದ್ರಗೊಳಿಸಬೇಕು. ಈ ಬಾಟಲಿಯನ್ನು ನೇರವಾಗಿ ಇರಿಸಿದರೆ ಏನು ಸಂಭವಿಸುವುದು?

ಬೆಲೂನು ಮುದುಡುವುದೇ?

ಬೆಲೂನಿನಲ್ಲಿರುವ ನೀರಿಗೆ ಏನು ಸಂಭವಿಸಿತು?

### 2. ಭಾರವನ್ನು ಎತ್ತೋಣ




ಹಾಲಿನ ಕವರುಗಳು, ಸ್ಟ್ರಾ, ನೂಲು, ಕಾರ್ಡ್‌ಬೋರ್ಡಿನ ತುಂಡು ಎಂಬಿವುಗಳನ್ನು ಸಂಗ್ರಹಿಸಿರಿ.

ಹಾಲಿನ ಕವರುಗಳ ಒಳಭಾಗಕ್ಕೆ ಸ್ಟ್ರಾವನ್ನು ತುರುಕಿ ಇರಿಸಿ ನೂಲಿನಿಂದ ಕಟ್ಟಿರಿ. ಕವರಿನ ಮೇಲ್ಭಾಗದಲ್ಲಿ ಕಾರ್ಡ್‌ಬೋರ್ಡನ್ನು ಇರಿಸಿ ಅದರ ಮೇಲೆ ಒಂದು ದೊಡ್ಡ ಪುಸ್ತಕವನ್ನು ಇರಿಸಿರಿ. ಬಳಿಕ ಸ್ಟ್ರಾಗಳ ಮೂಲಕ ಒಟ್ಟಿಗೆ ಊದಿ ನೋಡಿರಿ.

ಹೀಗೆ ಎಷ್ಟು ಭಾರವನ್ನು ಮೇಲೆತ್ತಲು ಸಾಧ್ಯವಾಗುವುದು?

### 3. ಹೆಚ್ಚು ಭಾರವನ್ನು ಎತ್ತೋಣ

ಪ್ಲಾಸ್ಟಿಕ್ ನಳಿಗೆ, ಬಿಸಿನೀರಿನ ಬ್ಯಾಗ್ ಎಂಬಿವುಗಳನ್ನು ಉಪಯೋಗಿಸಿ 'ವಾಯು ಜಾಕಿ' ತಯಾರಿಸಬಹುದು. ಬಿಸಿನೀರಿನ ಬ್ಯಾಗಿನ ಬದಲು ಫುಟ್ಬಾಲ್ ಬ್ಲಾಡರ್, ಏರ್‌ಬಾಲ್, ಬೆಲೂನು ಮೊದಲಾದವುಗಳನ್ನು ಉಪಯೋಗಿಸಬಹುದು.



### 4. ಕೃತಕ ಮಳೆ

ಪ್ಲಾಸ್ಟಿಕ್ ಬಾಟಲಿಯ ಅಡಿಭಾಗದಲ್ಲಿ ಹಲವು ರಂಧ್ರಗಳನ್ನೂ ಮೇಲ್ಭಾಗದಲ್ಲಿ ಒಂದು ರಂಧ್ರವನ್ನೂ ಮಾಡಬೇಕು. ಬಾಟಲಿಯಲ್ಲಿ ನೀರು ತುಂಬಿಸಬೇಕು. ಮೇಲ್ಭಾಗದಲ್ಲಿರುವ ರಂಧ್ರವನ್ನು ಮುಚ್ಚಿ ಹಿಡಿದರೆ ನೀರು ಹೊರಗೆ ಹರಿಯುವುದೇ? ತೆರೆದು ಹಿಡಿದರೆ?

ಹೀಗೆ ಸಂಭವಿಸಲು ಕಾರಣವೇನು?



### 5. ವಿಸಿಲ್ ಮೊಳಗಿಸೋಣ, ಬೆಲೂನು ಉಬ್ಬಿಸೋಣ

ಅಡಿಭಾಗವನ್ನು ತುಂಡರಿಸಿ ತೆಗೆದ ಎರಡು ಬಾಟಲಿಗಳನ್ನು ತೆಗೆದುಕೊಳ್ಳಿರಿ. ಒಂದರಲ್ಲಿ ಒಂದು ಬೆಲೂನನ್ನೂ ಎರಡನೆಯದರಲ್ಲಿ ಒಂದು ಡಾಲ್ ವಿಸಿಲನ್ನೂ ಸಿಕ್ಕಿಸಿ ಭದ್ರಪಡಿಸಿರಿ.

ಬೆಲೂನು ಉಬ್ಬಲು ಕಾರಣವೇನಾಗಿರಬಹುದು?

ವಿಸಿಲ್ ಶಬ್ದ ಮಾಡುವುದು ಯಾಕೆ?



**6. ಜಲವಿದ್ಯುತ್ ಸ್ಥಾವರ, ಗಾಳಿಯಂತ್ರ ಬಯಲು ಎಂಬಿವುಗಳನ್ನು ಸಂದರ್ಶಿಸಿರಿ.**


**7. ಜಲಚಕ್ರ, ಗಿರಿಗಿಟಿ ಮೊದಲಾದುವುಗಳನ್ನು ತಯಾರಿಸಿರಿ.**

# 8

# ಓದೋಣ ರಚಿಸೋಣ


ಪ್ರವಾಸಿಯು ಪರಿಶೀಲಿಸುತ್ತಿರುವ ಭೂಪಟ ಯಾವುದು?

ಯಾಕಾಗಿರಬಹುದು?



## ಭೂಪಟ ಓದೋಣ

ಕೇರಳದ ಜಿಲ್ಲೆಗಳನ್ನೂ ಪ್ರಧಾನ ಸ್ಥಳಗಳನ್ನೂ ನೀವು ಮೂರನೆಯ ತರಗತಿಯಲ್ಲಿ ಪರಿಚಯಿಸಿಕೊಂಡಿರುವಿರಲ್ಲವೇ? ಕೆಳಗೆ ಕೊಟ್ಟಿರುವ ಭೂಪಟವನ್ನು ಪರಿಶೀಲಿಸಿರಿ.



ನೀವು ಕಂಡುಹಿಡಿದ ಮಾಹಿತಿಗಳು ಯಾವುವು?

ಕಂಡುಹಿಡಿದ ಮಾಹಿತಿಗಳನ್ನು ಒಳಗೊಂಡ ಕೇರಳದ ಕುರಿತಾದ ಒಂದು ಟಿಪ್ಪಣಿ ತಯಾರಿಸಿರಿ.

## ಭೂಪಟದಲ್ಲಿರುವ ಸೂಚಕ

ಭೂಪಟದಲ್ಲಿ ರಸ್ತೆಗಳು, ರೈಲುಮಾರ್ಗಗಳು, ಹೊಳೆಗಳು, ವಿಮಾನ ನಿಲ್ದಾಣಗಳು ಮೊದಲಾದವುಗಳನ್ನು ಚಿಹ್ನೆಗಳು ಮತ್ತು ಬಣ್ಣಗಳನ್ನು ಉಪಯೋಗಿಸಿ ಗುರುತಿಸಲಾಗುವುದು. ಭೂಪಟದ ಬಣ್ಣಗಳು ಮತ್ತು ಚಿಹ್ನೆಗಳು ಏನನ್ನು ಸೂಚಿಸುತ್ತವೆ ಎಂಬುದನ್ನು ಸೂಚಕ ತೋರಿಸುತ್ತದೆ. ಭೂಪಟಗಳಲ್ಲಿ ಉಪಯೋಗಿಸುವ ಕೆಲವು ಚಿಹ್ನೆಗಳನ್ನು ಕೆಳಗೆ ಕೊಡಲಾಗಿದೆ.

**ಚಿಹ್ನೆಗಳು**

| | |
|---|---|
|  | ರೈಲುಮಾರ್ಗ |
|  | ವಿಮಾನ ನಿಲ್ದಾಣ |
|  | ಬಂದರು |
|  | ನದಿ |
|  | ಪ್ರವಾಸಿಕೇಂದ್ರ |
|  | ರಾಜಧಾನಿ |
|  | ಜಿಲ್ಲಾಕೇಂದ್ರ |
|  | ಪಕ್ಷಿಧಾಮ |

ಕೇರಳದ ಪ್ರಧಾನ ನದಿಗಳು, ಪ್ರವಾಸಿಕೇಂದ್ರಗಳು, ಪಕ್ಷಿಧಾಮಗಳು, ವನ್ಯಜೀವಿ ಸಂರಕ್ಷಣಾ ಕೇಂದ್ರಗಳು ಎಂಬಿವುಗಳ ಕುರಿತು ಮಾಹಿತಿಗಳನ್ನು ಅಧ್ಯಾಪಕರೊಡನೆ ಕೇಳಿ ತಿಳಿಯಿರಿ.

ಈ ಚಿಹ್ನೆಗಳನ್ನು ಉಪಯೋಗಿಸಿ ನಿಮಗೆ ತಿಳಿದಿರುವ ಮಾಹಿತಿಗಳನ್ನು ಕೇರಳದ ಭೂಪಟದಲ್ಲಿ ಸೇರಿಸಿರಿ.

## ತರಗತಿ ಕೋಣೆಯನ್ನು ರಚಿಸೋಣ

ಗೆಳೆಯರು ತರಗತಿ ಕೋಣೆಯನ್ನು ರಚಿಸಲು ತೀರ್ಮಾನಿಸಿದರು. ಮೇಜಿನ ನಾಲ್ಕು ಬದಿಗಳಲ್ಲಿ ನಾಲ್ಕು ಜನರು ಕುಳಿತರು. ಮೇಜಿನ ಮೇಲೆ ಕಾಗದವನ್ನಿರಿಸಿ ರಚಿಸಲು ಪ್ರಾರಂಭಿಸಿದರು.

“ಎಲ್ಲರೂ ಪೇಪರಿನ ಮೇಲ್ಭಾಗದ ಬಲಭಾಗದಲ್ಲಿ ಹೆಸರು ಬರೆಯಿರಿ. ಬಲಭಾಗ, ಎಡಭಾಗ, ಮೇಲ್ಭಾಗ, ಕೆಳಭಾಗ ಎಂಬಿವುಗಳನ್ನೂ ಗುರುತಿಸಬೇಕು” –ಅಭಿ ಹೇಳಿದನು. ಆಗ ಟೀಚರ್ ಬಂದರು. “ತರಗತಿಯ ಬಾಗಿಲು, ಕಿಟಕಿಗಳು, ಮೇಜು, ಬೆಂಚುಗಳು, ಬೋರ್ಡು ಎಂಬಿವುಗಳನ್ನೂ ರಚಿಸಬೇಕು” – ಟೀಚರ್ ನೆನಪಿಸಿದರು.



ಮಕ್ಕಳು ರಚಿಸಿದ ತರಗತಿಯ ರೇಖಾಚಿತ್ರವನ್ನು ಅವರು ಹೆಮ್ಮೆಯಿಂದ ಎತ್ತಿ ಹಿಡಿದು ತೋರಿಸಿದರು.

ತರಗತಿಯ ಇತರ ವಿದ್ಯಾರ್ಥಿಗಳು ಆಶ್ಚರ್ಯಪಟ್ಟರು.

ಒಂದೇ ತರಗತಿಯ ನಾಲ್ಕು ವಿಭಿನ್ನ ಚಿತ್ರಗಳೋ!

ನಾಲ್ಕು ಚಿತ್ರಗಳೂ ಭಿನ್ನವಾಗಿರಲು ಕಾರಣವೇನಿರಬಹುದು?

ತರಗತಿ ಕೋಣೆಯ ರೇಖಾಚಿತ್ರವನ್ನು ಎಲ್ಲರಿಗೂ ಒಂದೇ ರೀತಿಯಾಗಿ ರಚಿಸಲು ಸಾಧ್ಯವಿಲ್ಲವೇ?

ಅದಕ್ಕಾಗಿ ಗಮನಿಸಬೇಕಾದ ವಿಚಾರಗಳು ಯಾವುವು?




ಗೋಡೆಯಲ್ಲಿ ತೂಗುಹಾಕಿದ ಭೂಪಟದ ಮೇಲ್ಭಾಗ ಉತ್ತರ ದಿಕ್ಕನ್ನು ಸೂಚಿಸುವುದು. ದಿಕ್ಕನ್ನು ಸೂಚಿಸಲು ಈ ಚಿಹ್ನೆಯನ್ನು ಉಪಯೋಗಿಸಲಾಗುವುದು. ಇದರ ಆಧಾರದಲ್ಲಿ ಇತರ ದಿಕ್ಕುಗಳನ್ನು ಕಂಡುಹಿಡಿಯಬಹುದಲ್ಲವೇ.

ನಿಮ್ಮ ತರಗತಿಕೋಣೆಯ ಉತ್ತರದಿಕ್ಕು ಎಲ್ಲಿದೆ?

ಕಾಗದದ ಮೇಲ್ಭಾಗದಲ್ಲಿ ಉತ್ತರದಿಕ್ಕು ಬರುವಂತೆ ರೇಖಾಚಿತ್ರವನ್ನು ರಚಿಸಬೇಕು. ದಕ್ಷಿಣ, ಪೂರ್ವ, ಪಶ್ಚಿಮ ಎಂಬೀ ದಿಕ್ಕುಗಳನ್ನೂ ಸರಿಯಾಗಿ ಗುರುತಿಸಿರಿ.


ಪ್ರತಿಯೊಂದಕ್ಕೂ ಕೆಳಗೆ ಕೊಟ್ಟಿರುವ ಚಿಹ್ನೆಗಳನ್ನು ಸೇರಿಸಿ ನೀವೂ ರಚಿಸಿರಿ.

T ಮೇಜು    D ಬಾಗಿಲು    W ಕಿಟಿಕಿ

B.B ಬ್ಲಾಕ್‌ಬೋರ್ಡ್    B ಬೆಂಚು

ರಚಿಸಿದ ಚಿತ್ರಗಳನ್ನು ಗೋಡೆಯಲ್ಲಿ ಅಂಟಿಸಿರಿ. ಇನ್ನು ನೋಡಿರಿ, ಎಲ್ಲಾ ಚಿತ್ರಗಳೂ ಒಂದೇ ರೀತಿಯಾಗಿವೆಯಲ್ಲವೇ?

## ದಿಕ್ಕುಗಳನ್ನು ತಿಳಿಯೋಣ





ಸೂರ್ಯನನ್ನು ನೋಡಿ ನಾವು ಸುಲಭವಾಗಿ ದಿಕ್ಕನ್ನು ತಿಳಿಯಲು ಪ್ರಯತ್ನಿಸುವೆವಲ್ಲವೇ? ಚಿತ್ರವನ್ನು ನಿರೀಕ್ಷಣೆ ಮಾಡಿರಿ. ಉದಯ ಸೂರ್ಯನನ್ನು ನೋಡಿ ಲೀನ ದಿಕ್ಕುಗಳನ್ನು ಕಂಡುಹಿಡಿಯುವುದು ಹೇಗೆಂದು ಗಮನಿಸಿರಿ.

- ಲೀನ ಯಾವ ಭಾಗಕ್ಕೆ ನೋಡಿ ನಿಂತಿರುವಳು?
- ಲೀನಳ ಬಲಗೈಯ ಭಾಗ ಯಾವ ದಿಕ್ಕನ್ನು ಸೂಚಿಸುವುದು?
- ಲೀನಳ ನೆರಳು ಬೀಳುವ ಭಾಗ ಯಾವ ದಿಕ್ಕು?

ಸೂರ್ಯನು ಕಂಡುಬರದ ಸಮಯಗಳಲ್ಲಿ ನಮಗೆ ದಿಕ್ಕುಗಳನ್ನು ತಿಳಿಯಲು ಹೇಗೆ ಸಾಧ್ಯವಾಗುವುದು?




## ದಿಕ್ಸೂಚಿ




ದಿಕ್ಸೂಚಿಯು ದಿಕ್ಕನ್ನು ತಿಳಿಯಲು ಸಹಾಯಕವಾದ ಉಪಕರಣವಾಗಿದೆ. ದಿಕ್ಸೂಚಿಯ ಮಧ್ಯದಲ್ಲಿ ಒಂದು ಕಾಂತಸೂಜಿಯನ್ನು ಕಾಣಬಹುದು. ಈ ಸೂಜಿ ಉತ್ತರ–ದಕ್ಷಿಣವಾಗಿಯೇ ನಿಲ್ಲುವುದು. ಈ ಸೂಜಿಯಲ್ಲಿ ಪ್ರತ್ಯೇಕವಾಗಿ ಗುರುತಿಸಲಾದ ತುದಿಯು ಉತ್ತರ ದಿಕ್ಕನ್ನು ಸೂಚಿಸುವುದು. ತರಗತಿಕೋಣೆಯ ಮಧ್ಯದಲ್ಲಿ ದಿಕ್ಸೂಚಿಯನ್ನಿರಿಸಿ ದಿಕ್ಕುಗಳನ್ನು ಗುರುತಿಸಬಹುದು.

## ಶಾಲೆಯ ರೇಖಾಚಿತ್ರ




**ಸೂಚಕ**




ಇದು ನಂದನಳ ಶಾಲೆಯ ರೇಖಾಚಿತ್ರವಾಗಿದೆ.


ಕೆಳಗೆ ಕೊಟ್ಟಿರುವ ವಿಚಾರಗಳನ್ನು ರೇಖಾಚಿತ್ರದಲ್ಲಿ ಕಂಡುಹಿಡಿಯಿರಿ.

- ಶಾಲೆಯ ಯಾವ ದಿಕ್ಕಿನಲ್ಲಿ ರಾಜ್ಯ ಹೆದ್ದಾರಿ ಹಾದುಹೋಗುವುದು?
- ಅಡುಗೆಶಾಲೆಯ ಯಾವ ದಿಕ್ಕಿನಲ್ಲಿ ಬಾವಿ ಇದೆ?
- ಧ್ವಜಸ್ತಂಭದ ಯಾವ ದಿಕ್ಕಿನಲ್ಲಿ ಸ್ಟೇಜ್ ಇದೆ?


ಹೀಗೆಯೇ ನಿಮ್ಮ ಶಾಲೆಯ ರೇಖಾಚಿತ್ರವನ್ನು ಪರಿಸರಪುಸ್ತಕದಲ್ಲಿ ರಚಿಸಿರಿ.

## ಸನಲ್‌ನ ಪಂಚಾಯತ್

ಸನಲ್‌ನ ಶಾಲೆ ಆನರ ಪಂಚಾಯತಿನಲ್ಲಿದೆ.




### ಆನರ ಗ್ರಾಮಪಂಚಾಯತ್




**ಸೂಚಕ**



ಆನರ ಪಂಚಾಯತಿನ ಭೂಪಟವನ್ನು ಪರಿಶೀಲಿಸಿ ಪ್ರತಿಯೊಂದು ವಾರ್ಡುಗಳ ವೈಶಿಷ್ಟ್ಯಗಳನ್ನು ಪಟ್ಟಿ ಮಾಡಿರಿ.

| ವಾರ್ಡ್ ನಂಬರ್ | ವೈಶಿಷ್ಟ್ಯಗಳು |
|---|---|
| 1 | • ತಮಿಳ್ನಾಡಿನೊಂದಿಗೆ ಗಡಿ ಹಂಚಿಕೊಂಡಿದೆ.<br>• ಸಾರ್ವಜನಿಕ ಬಾವಿ ಇದೆ.<br>• ಶಾಲೆ ಇದೆ.<br>• ಹೊಳೆ ಇದೆ. |
| 2 | |
| 3 | |
| 4 | |
| | |

ಇದೇ ರೀತಿ ನಿಮ್ಮ ಪಂಚಾಯತಿನ ವೈಶಿಷ್ಟ್ಯಗಳನ್ನು ಗ್ರಾಮಪಂಚಾಯತ್ ಭೂಪಟದಿಂದ ಕಂಡುಹಿಡಿಯಿರಿ.


## ನನ್ನ ಜಿಲ್ಲೆ

ಕೇರಳದ ಭೂಪಟದಲ್ಲಿ ನಿಮ್ಮ ಜಿಲ್ಲೆಯನ್ನು ಕಂಡುಹಿಡಿಯಿರಿ.

ಸ್ವಂತ ಜಿಲ್ಲೆಯ ರೇಖಾಚಿತ್ರದಲ್ಲಿ ಕೆಳಗೆ ಕೊಟ್ಟಿರುವವುಗಳನ್ನು ಗುರುತಿಸಿರಿ.

- ನೆರೆ ಜಿಲ್ಲೆಗಳು
- ಜಿಲ್ಲಾಕೇಂದ್ರ
- ಪ್ರವಾಸಿ ಕೇಂದ್ರಗಳು
- ನದಿಗಳು

ನಮಗೆ ಬೇರೆ ಏನೆಲ್ಲ ದಾಖಲಿಸಬಹುದು?



ವಿಶಾಲವಾದ ಒಂದು ಪ್ರದೇಶದ ವೈಶಿಷ್ಟ್ಯಗಳನ್ನು ಒಂದು ಕಾಗದದಲ್ಲಿ ನಿಖರವಾಗಿ ಚಿತ್ರೀಕರಿಸಲು ನಮಗೆ ಸಾಧ್ಯವಿದೆ. ಈ ರೀತಿಯಾಗಿ ಭೂಪ್ರದೇಶಗಳ ಚಿತ್ರೀಕರಣವನ್ನು ಭೂಪಟ ಎಂದು ಹೇಳುವರು.



## ಕಲಿಕೆಯ ಪ್ರಧಾನ ಸಾಧನೆಗಳು

- ಸೂಚಕಗಳ ಆಧಾರದಲ್ಲಿ ಕೇರಳದ ಭೂಪಟವನ್ನು ಓದುತ್ತಾರೆ.
- ಭೂಪಟದಲ್ಲಿ ದಿಕ್ಕುಗಳನ್ನು ನಿಖರವಾಗಿ ದಾಖಲಿಸುತ್ತಾರೆ.
- ತನ್ನ ತರಗತಿಕೋಣೆಯ ಮತ್ತು ಶಾಲೆಯ ರೇಖಾಚಿತ್ರವನ್ನು ದಿಕ್ಕಿಗನುಸಾರವಾಗಿ ತಯಾರಿಸುತ್ತಾರೆ.
- ದಿಕ್ಚಕ್ರವನ್ನು ಉಪಯೋಗಿಸಿ ದಿಕ್ಕುಗಳನ್ನು ಕಂಡುಹಿಡಿಯುತ್ತಾರೆ.
- ಭೂಪಟದಲ್ಲಿ ಚಿಹ್ನೆಗಳನ್ನು ಬಳಸಿ ಪ್ರಧಾನ ಸಂಪನ್ಮೂಲಗಳನ್ನು ಗುರುತಿಸುತ್ತಾರೆ.
- ಕೇರಳದ ಹಾಗೂ ತನ್ನ ಜಿಲ್ಲೆಯ ಭೂಪಟದಲ್ಲಿ ಚಿಹ್ನೆಗಳನ್ನು ಬಳಸಿ ಸಂಪನ್ಮೂಲಗಳನ್ನು ಗುರುತಿಸುತ್ತಾರೆ.
- ಪಂಚಾಯತ್ ಭೂಪಟವನ್ನು ಓದಿ ಪಂಚಾಯತ್‌ನ ಸಂಪನ್ಮೂಲಗಳನ್ನು ಪಟ್ಟಿ ಮಾಡುತ್ತಾರೆ.
- ಜಿಲ್ಲಾ ಭೂಪಟದಲ್ಲಿ ಸಂಪನ್ಮೂಲಗಳನ್ನು ಚಿತ್ರಿಸುತ್ತಾರೆ.



## ಮೌಲ್ಯಮಾಪನ ಮಾಡೋಣ


**1 ದಿಕ್ಕುಗಳ ಆಟ**

ಒಂಭತ್ತು ಕೋಣೆಗಳ ನಡುವೆ ಇರುವ ಕೋಣೆಯಲ್ಲಿ ಒಂದು ಮಗು ನಿಲ್ಲಬೇಕು. 'ಪೂರ್ವ' ಎಂದು ಹೇಳುವಾಗ ಪೂರ್ವದಲ್ಲಿರುವ ಕೋಣೆಗೆ ಮಗು ಹಾರಬೇಕು. ಕೂಡಲೇ ನಡುವಿನ ಕೋಣೆಗೆ ಹಿಂದಕ್ಕೆ ಹಾರಬೇಕು. ಹಲವು ದಿಕ್ಕುಗಳನ್ನು ಹೇಳಿ ಆಟವನ್ನು ಮುಂದುವರಿಸಬೇಕು. ಅತಿ ಹೆಚ್ಚು ಸಮಯ ತಪ್ಪದೆ ಆಡಿದ ಮಗು ಮೊದಲ ಸ್ಥಾನ ಗಳಿಸುವುದು.

| | | |
|---|---|---|
| ವಾಯುವ್ಯ | ಉತ್ತರ | ಈಶಾನ್ಯ |
| ಪಶ್ಚಿಮ | | ಪೂರ್ವ |
| ನೈಋತ್ಯ | ದಕ್ಷಿಣ | ಆಗ್ನೇಯ |

## 2. ಯಾವ ದಿಕ್ಕಿನಲ್ಲಿ?

ಲಿಯಾನಳು ಮೃಗಾಲಯದ ನಿರೀಕ್ಷಣಾ ಗೋಪುರದಲ್ಲಿ ನಿಂತಿದ್ದಾಳೆ. ಪ್ರತಿಯೊಂದು ಜೀವಿ ಗೋಪುರದ ಯಾವ ದಿಕ್ಕಿನಲ್ಲಿ ಇದೆಯೆಂದು ಬರೆಯಿರಿ.




- ಗೋಪುರದ ಉತ್ತರ ದಿಕ್ಕಿನಲ್ಲಿರುವ ಜೀವಿ ಯಾವುದು?
- ಒಂಟೆ ಗೋಪುರದ ಯಾವ ದಿಕ್ಕಿನಲ್ಲಿದೆ?
- ಕುದುರೆ ಗೋಪುರದ ಯಾವ ದಿಕ್ಕಿನಲ್ಲಿದೆ?
- ಮೊಸಳೆ ಗೋಪುರದ ಯಾವ ದಿಕ್ಕಿನಲ್ಲಿದೆ?
- ಹಾವಿನ ಸ್ಥಾನ ಎಲ್ಲಿ?

### 3. ಸೂಚಕಗಳನ್ನು ತಯಾರಿಸೋಣ

ಕೆಳಗೆ ಕೊಟ್ಟಿರುವ ರೇಖಾಚಿತ್ರದಿಂದ ಕಂಡುಕೊಳ್ಳಬಹುದಾದ ಮಾಹಿತಿಗಳು ಯಾವುವು?




ಕಂಡುಕೊಂಡ ಪ್ರತಿಯೊಂದು ಮಾಹಿತಿಗಳ ಸೂಚಕಗಳನ್ನು ತಯಾರಿಸಿ ದಾಖಲಿಸಿರಿ.

- ಪೋಲೀಸ್ ಸ್ಟೇಷನ್
- ರೈಲ್ವೇ ನಿಲ್ದಾಣ
- ಬಸ್ಸು ನಿಲ್ದಾಣ
- ಪೋಸ್ಟ್ ಆಫೀಸ್
- ಹೊಳೆ
- ಸೇತುವೆ
-

ಸೂಚಕ

**4. ಸರಿಯಾದುದರ ಎದುರು ✔ ಚಿಹ್ನೆಯನ್ನು ಹಾಕಿರಿ.**

- ದಿಕ್ಕನ್ನು ತಿಳಿಯಲಿರುವ ಉಪಕರಣದ ಹೆಸರೇನು?

  (ಥರ್ಮೋಮೀಟರ್, ಸ್ಪೀಡೋಮೀಟರ್, ದಿಕ್ಚಕ್ರ, ದೂರದರ್ಶಕ)

- ಒಂದು ಭೂಪಟದ ಮೇಲ್ಭಾಗ ಯಾವ ದಿಕ್ಕನ್ನು ಸೂಚಿಸುತ್ತದೆ?

  (ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ)

**5. ಕೆಳಗೆ ಕೊಟ್ಟಿರುವ ಚಿಹ್ನೆಗಳು ಏನನ್ನು ಸೂಚಿಸುತ್ತವೆ?**

| | |
|---|---|
| - - - - | |
| RS | |
| S H | |
|  | |



## ಮುಂದುವರಿದ ಚಟುವಟಿಕೆಗಳು


- ನಿಮ್ಮ ಮನೆಯ ರೂಪರೇಖೆಯನ್ನು ರಚಿಸಿರಿ. ಅದರ ಸಮೀಪವಿರುವ ಕಟ್ಟಡಗಳು, ದಾರಿ, ರಸ್ತೆ, ಮನೆಗಳನ್ನು ಗುರುತಿಸಿರಿ.
- ಕಾರ್ಡ್‌ಬೋರ್ಡ್, ವಾರ್ತಾಪತ್ರಿಕೆಯ ತುಣುಕುಗಳನ್ನು ಉಪಯೋಗಿಸಿ ನಿಮ್ಮ ಶಾಲೆಯ ರೇಖಾಚಿತ್ರದ ಮಾದರಿಯನ್ನು ತಯಾರಿಸಿರಿ.

9


# ಭಾರತದೆಡೆಗೆ...

## ವಿಶಾಲ ಭೂಮಿ

*ನನ್ನ ದೇಶ ಭಾರತದ*
*ರಾಜ್ಯಗಳನು ಹೇಳುವೆ*
*ಉತ್ತರದ ಜಮ್ಮು ಕಾಶ್ಮೀರ*
*ಪ್ರವಾಸಿಗಳ ಸ್ವರ್ಗ*
*ದಕ್ಷಿಣ ತುದಿಯ ತಮಿಳುನಾಡು*
*ಪೊಂಗಲ್ ಉತ್ಸವದ ನಾಡು*
*ಪೂರ್ವ ಭಾಗದ ಅರುಣಾಚಲ*
*ಕೆಂಪು ಬೆಟ್ಟಗಳ ರಾಜ್ಯ*
*ಗಾಂಧೀಜಿ ಹುಟ್ಟಿದ ಗುಜರಾತು*
*ಪಶ್ಚಿಮತುದಿಯಲ್ಲಿಹುದಲ್ಲವೇ*



ಕವಿತೆಯಲ್ಲಿ ಏನೆಲ್ಲಾ ಸೂಚಿಸಲಾಗಿದೆ?
ರಾಜ್ಯಗಳು ಯಾವುವು?
ಬರೆಯಿರಿ.
ಭಾರತದಲ್ಲಿ ಇತರ ರಾಜ್ಯಗಳೂ ಇವೆಯಲ್ಲವೇ.
ಅವುಗಳು ಯಾವುವು?




ಟಿಪ್ಪಣಿ: ಆಂಧ್ರಪ್ರದೇಶ ವಿಭಜಿಸಲ್ಪಟ್ಟು ಆಂಧ್ರಪ್ರದೇಶ, ತೆಲಂಗಾಣ ಎಂಬೀ ಎರಡು ರಾಜ್ಯಗಳನ್ನು ರೂಪೀಕರಿಸಲಾಗಿದೆ.

## ತಿಳಿದುಕೊಳ್ಳೋಣ

ಭಾರತದ ಭೂಪಟವನ್ನು ನಿರೀಕ್ಷಣೆ ಮಾಡಿದಿರಲ್ಲವೇ?

- ಅರಬೀಸಮುದ್ರಕ್ಕೆ ತಾಗಿಕೊಂಡಿರುವ ರಾಜ್ಯಗಳು ಯಾವುವು?
- ಬಂಗಾಳಕೊಲ್ಲಿಗೆ ತಾಗಿಕೊಂಡಿರುವ ರಾಜ್ಯಗಳು ಯಾವುವು?
- ಸಮುದ್ರ ತೀರಗಳಿಲ್ಲದ ರಾಜ್ಯಗಳು ಯಾವುವು?

## ಹೆಚ್ಚು ತಿಳಿಯೋಣ



### ಅರುಣಾಚಲ ಪ್ರದೇಶ

ಭಾರತದ ಪೂರ್ವ ತುದಿಯಲ್ಲಿರುವ ರಾಜ್ಯ. ನಮ್ಮ ದೇಶದ ಅತ್ಯಂತ ದೊಡ್ಡ ಬೌದ್ಧ ವಿಹಾರ ಇಲ್ಲಿದೆ. ಇಟಾನಗರ ರಾಜಧಾನಿ. ಅರುಣಾಚಲಪ್ರದೇಶ ಓರ್ಕಿಡ್‌ಗಳ ಸ್ವರ್ಗವಾಗಿದೆ. ಮಿಥುನ್ ಅರುಣಾಚಲವಾಸಿಗಳ ಪ್ರೀತಿಯ ಮೃಗ. ವಿವಿಧ ಭಾಷೆಗಳನ್ನು ಮಾತನಾಡುವವರು ಈ ರಾಜ್ಯದಲ್ಲಿದ್ದಾರೆ.




### ಜಮ್ಮುಕಾಶ್ಮೀರ



ಭಾರತದ ಉತ್ತರ ತುದಿಯಲ್ಲಿರುವ ರಾಜ್ಯ. ಜಮ್ಮುಕಾಶ್ಮೀರ ಬೆಟ್ಟ, ಸರೋವರ, ನದಿಗಳ ನಾಡಾಗಿದೆ. ಭಾರತದ ಅತೀ ದೊಡ್ಡ ಶುದ್ಧ ಜಲ ಸರೋವರವಾದ ವೂಳಾರ್ ಶ್ರೀನಗರದಲ್ಲಿದೆ. ದಾಲ್ ಸರೋವರವೂ ಪ್ರಸಿದ್ಧವಾಗಿದೆ. ಉರ್ದು, ಕಾಶ್ಮೀರಿ ಇಲ್ಲಿನ ಮುಖ್ಯ ಭಾಷೆಗಳು. ಹಫಿಸ, ಬಚ್ಚಾ ನಾಗ್ಮಾ, ರಫ್ ಇಲ್ಲಿನ ನೃತ್ಯರೂಪಗಳಾಗಿವೆ. ಜಮ್ಮುಕಾಶ್ಮೀರಕ್ಕೆ ಎರಡು ರಾಜಧಾನಿಗಳಿವೆ. ಚಳಿಗಾಲದ ರಾಜಧಾನಿ ಜಮ್ಮು. ಬೇಸಿಗೆಕಾಲದ ರಾಜಧಾನಿ ಶ್ರೀನಗರ.




## ತಮಿಳುನಾಡು



ಭಾರತದ ದಕ್ಷಿಣ ತುದಿಯಲ್ಲಿರುವ ರಾಜ್ಯ. ಪ್ರಧಾನ ಭಾಷೆ ತಮಿಳು. ಕೇರಳದ ನೆರೆ ರಾಜ್ಯ. ಭರತನಾಟ್ಯದ ಊರು. ರಾಜಧಾನಿ ಚೆನ್ನೈ. ರೇಷ್ಮೆ ಸೀರೆಗಳಿಗೆ ಪ್ರಖ್ಯಾತವಾದ ಕಾಂಚೀಪುರಂ ತಮಿಳುನಾಡಿನಲ್ಲಿದೆ.



## ಗುಜರಾತ್



ಭಾರತದ ಪಶ್ಚಿಮ ತುದಿಯಲ್ಲಿರುವ ರಾಜ್ಯ. ಮಹಾತ್ಮಾಗಾಂಧಿಯ ಹುಟ್ಟಿನಿಂದ ಪ್ರಸಿದ್ಧವಾದ ಪೋರ್ ಬಂದರ್ ಇಲ್ಲಿದೆ. ಗಾರ್ಬ ನೃತ್ಯ ಗುಜರಾತಿನ ಸಾಂಪ್ರದಾಯಿಕ ಕಲಾರೂಪವಾಗಿದೆ. ಗುಜರಾತ್ ಭಾರತದಲ್ಲಿ ಅತೀ ಹೆಚ್ಚು ಸಮುದ್ರ ತೀರವಿರುವ ರಾಜ್ಯವಾಗಿದೆ. ರಾಜಧಾನಿ ಗಾಂಧೀನಗರ. ಗುಜರಾತಿ ಪ್ರಧಾನ ಭಾಷೆ.



ನಮ್ಮ ದೇಶದ ಕೆಲವು ರಾಜ್ಯಗಳನ್ನು ಪರಿಚಯಿಸಿಕೊಂಡಿರಲ್ಲವೇ.

- ಇತರ ರಾಜ್ಯಗಳ ಮಾಹಿತಿಗಳನ್ನು ಸಂಗ್ರಹಿಸಿರಿ. ಪರಿಸರಪುಸ್ತಕದಲ್ಲಿ ದಾಖಲಿಸಿರಿ.

ಸಂಗ್ರಹಿಸಿದ ಮಾಹಿತಿಗಳನ್ನು ಉಪಯೋಗಿಸಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ರಾಜ್ಯ | ರಾಜಧಾನಿ | ನೆರೆ ರಾಜ್ಯಗಳು |
|---|---|---|
| | | |
| | | |
| | | |
| | | |

ಭಾರತದ ರಾಜ್ಯಗಳನ್ನು ಪರಿಚಯಿಸಿಕೊಂಡಿರಲ್ಲವೇ.

ಇವುಗಳಲ್ಲದೆ 6 ಕೇಂದ್ರಾಡಳಿತ ಪ್ರದೇಶಗಳು ಮತ್ತು ದೇಶದ ರಾಜಧಾನಿಯಾದ ದೆಹಲಿ ಕೂಡಾ ಇದೆ. ಅವುಗಳ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಿ ಪರಿಸರಪುಸ್ತಕದಲ್ಲಿ ಬರೆಯಿರಿ.

## ಭಾಷೆಗಳು ಹಲವಾದರೂ

ಶಾಲಾ ಅಸೆಂಬ್ಲಿಯಲ್ಲಿ ನಾವು ಹೇಳುವ ಪ್ರತಿಜ್ಞೆ ಆರಂಭವಾಗುವುದು ಹೇಗೆ?

ಇತರ ರಾಜ್ಯಗಳ ಭಾಷೆಗಳಲ್ಲಿ ಈ ಪ್ರತಿಜ್ಞೆ ಆರಂಭವಾಗುವುದು ಹೇಗೆಂದು ಗಮನಿಸಿರಿ.




ಇವುಗಳು ನಮ್ಮ ನೆರೆ ರಾಜ್ಯಗಳ ಭಾಷೆಗಳಾಗಿವೆ.

ಭಾರತದ ಇತರ ರಾಜ್ಯಗಳ ಭಾಷೆಗಳು ಯಾವುವು?

| ರಾಜ್ಯ | ಭಾಷೆ |
|---|---|
| | |
| ಮಧ್ಯಪ್ರದೇಶ | ಹಿಂದಿ |
| ಪಶ್ಚಿಮ ಬಂಗಾಳ | ಬಂಗಾಳಿ |
| | |
| | |

- ನೀವು ಭರ್ತಿಗೊಳಿಸಿದ ಪಟ್ಟಿಯನ್ನು ಪರಿಶೀಲಿಸಿ ಅತೀ ಹೆಚ್ಚು ರಾಜ್ಯಗಳಲ್ಲಿ ಮಾತನಾಡುವ ಭಾಷೆ ಯಾವುದೆಂದು ತಿಳಿಯಿರಿ.

## ಭಾಷಾ ವೈಶಿಷ್ಟ್ಯಗಳು

- ಅತಿ ಹೆಚ್ಚು ಭಾರತೀಯರು ಮಾತನಾಡುವ ಭಾಷೆ ಹಿಂದಿ ಆಗಿದೆ.
- ಸಂವಿಧಾನವು ಅಂಗೀಕರಿಸಿದ 22 ಪ್ರಾದೇಶಿಕ ಭಾಷೆಗಳಿವೆ.
- ಹತ್ತು ಲಕ್ಷಕ್ಕಿಂತ ಹೆಚ್ಚು ಜನರು ಮಾತನಾಡುವ ನಲುವತ್ತರಷ್ಟು ಭಾರತೀಯ ಭಾಷೆಗಳಿವೆ.
- ಭಾರತದಲ್ಲಿ ಸಾವಿರದ ಏಳುನೂರರಷ್ಟು ಆಡುಭಾಷೆಗಳಿವೆ. ಇವುಗಳಲ್ಲಿ ಕೆಲವನ್ನು ಮಾತನಾಡುವವರ ಸಂಖ್ಯೆ ಸಾವಿರಕ್ಕಿಂತಲೂ ಕಡಿಮೆ.

## ಕಲೆಗಳು

ವಿವಿಧ ಭಾಷೆಗಳು ನಮಗಿವೆಯಲ್ಲವೇ. ಅದೇ ರೀತಿ ಬೇರೆಬೇರೆ ಕಲೆಗಳೂ ನಮಗಿವೆ.



ಕೂಚುಪ್ಪುಡಿ    ಒಡಿಸ್ಸಿ    ಕಥಕ್    ಭರತನಾಟ್ಯ    ಮಣಿಪುರಿ

ಇವುಗಳಲ್ಲಿ ನಿಮಗೆ ತಿಳಿದಿರುವ ಕಲೆ ಯಾವುದು? ಅದು ಯಾವ ರಾಜ್ಯದ ಕಲೆಯಾಗಿದೆ?

ಭಾರತದ ಇತರ ರಾಜ್ಯಗಳ ಪ್ರಧಾನ ಕಲೆಗಳನ್ನು ಕಂಡುಹಿಡಿದು ಪರಿಸರಪುಸ್ತಕದಲ್ಲಿ ಬರೆಯಿರಿ.

| ರಾಜ್ಯ | ಕಲಾರೂಪಗಳು |
|---|---|
| ತಮಿಳುನಾಡು | ಭರತನಾಟ್ಯ |
| | ಒಡಿಸ್ಸಿ |
| | ಕಥಕ್ |
| | |

ವಿವಿಧ ಭಾಷೆಗಳು, ಉಡುಗೆ ತೊಡುಗೆ, ವಸ್ತ್ರ ಧರಿಸುವ ವಿಧಾನ ಎಂಬಿವುಗಳಲ್ಲಿರುವ ವ್ಯತ್ಯಾಸ, ವಿವಿಧ ಕಲಾರೂಪಗಳು.....

ನಮ್ಮ ಭಾರತ ಯಾವೆಲ್ಲಾ ವೈವಿಧ್ಯಗಳಿಂದ ಕೂಡಿದೆ?

ಈ ವೈವಿಧ್ಯಗಳ ನಡುವೆಯೂ ಭಾರತೀಯರಾದ ನಮ್ಮನ್ನು ಒಗ್ಗೂಡಿಸುವವುಗಳು ಯಾವುವು?

## ರಾಷ್ಟ್ರೀಯ ಸಂಕೇತಗಳು

ನಾವೆಲ್ಲರೂ ಒಂದೇ ಮನಸ್ಸಿನಿಂದ ಗೌರವಿಸುವ ಹೆಮ್ಮೆಪಡುವ ರಾಷ್ಟ್ರೀಯ ಸಂಕೇತಗಳ ಕುರಿತು ತಿಳಿಯಬೇಡವೇ?

## ರಾಷ್ಟ್ರಗೀತೆ

ರಾಷ್ಟ್ರಗೀತೆಯನ್ನು ರಚಿಸಿದವರು ಯಾರು?

ರಾಷ್ಟ್ರಗೀತೆಯನ್ನು ಹಾಡುವಾಗ ನಾವು ಗಮನಿಸಬೇಕಾದ ವಿಚಾರಗಳು ಯಾವುವು?


- ಹಾಡಲು ತೆಗೆದುಕೊಳ್ಳುವ ಸಮಯ
- 

ರಾಷ್ಟ್ರಗೀತೆಯನ್ನು ಹಾಡುವಾಗ ಗೌರವ ಸೂಚಕವಾಗಿ ಎದ್ದು ನಿಲ್ಲಬೇಕು. 52 ಸೆಕೆಂಡು ಅವಧಿಯಲ್ಲಿ ರಾಷ್ಟ್ರಗೀತೆಯನ್ನು ಹಾಡಬೇಕು.

### ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ಬಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಶ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ರವೀಂದ್ರನಾಥ ಠಾಗೋರ್



ನಮ್ಮ ರಾಷ್ಟ್ರಗೀತೆಯನ್ನು ರಚಿಸಿದವರು ರವೀಂದ್ರನಾಥ ಠಾಗೋರ್. ಅವರು ಪಶ್ಚಿಮ ಬಂಗಾಳದ ಕೋಲ್ಕತ್ತದಲ್ಲಿ ಜನಿಸಿದರು. ಚಿಕ್ಕಂದಿನಲ್ಲೇ ಕವಿತೆಗಳನ್ನು ಬರೆಯತೊಡಗಿದರು. ಗೀತಾಂಜಲಿ ಎಂಬ ಕೃತಿಗೆ ಸಾಹಿತ್ಯಕ್ಕಾಗಿರುವ ನೋಬೆಲ್ ಪ್ರಶಸ್ತಿಯನ್ನು ಪಡೆದರು. ಅವರು ಶಾಂತಿನಿಕೇತನದಲ್ಲಿ ಪ್ರಾರಂಭಿಸಿದ ಶಾಲೆ ಮುಂದೆ ವಿಶ್ವಭಾರತಿ ವಿಶ್ವವಿದ್ಯಾಲಯವಾಗಿ ಬದಲಾಯಿತು.



## ರಾಷ್ಟ್ರೀಯ ಗಾನ

ವಂದೇ ಮಾತರಂ... ಎಂದು ಆರಂಭಿಸುವ ಹಾಡಾಗಿದೆ ನಮ್ಮ ರಾಷ್ಟ್ರೀಯ ಗಾನ. ಇದನ್ನು ರಚಿಸಿದವರು ಬಂಕಿಮ ಚಂದ್ರ ಚಟರ್ಜಿ.

## ರಾಷ್ಟ್ರಧ್ವಜ

ನಮ್ಮ ರಾಷ್ಟ್ರಧ್ವಜದ ಮೇಲ್ಭಾಗದಲ್ಲಿ ಕೇಸರಿ, ಮಧ್ಯದಲ್ಲಿ ಬಿಳಿ, ಕೆಳಗೆ ಹಸಿರು ಹೀಗೆ 3 ಬಣ್ಣಗಳಿವೆ. ಬಿಳಿ ಭಾಗದ ಮಧ್ಯದಲ್ಲಿ ನೀಲಿ ಬಣ್ಣದ 24 ಅರಗಳಿರುವ ಅಶೋಕ ಚಕ್ರವಿದೆ. ನಮ್ಮ ರಾಷ್ಟ್ರಧ್ವಜದ ರೂಪಕಲ್ಪನೆ ಮಾಡಿದವರು ಪಿಂಗಾಳಿ ವೆಂಕಯ್ಯ.





## ರಾಷ್ಟ್ರ ಲಾಂಛನ


ಸಾರಾನಾಥದಲ್ಲಿ ಅಶೋಕ ಚಕ್ರವರ್ತಿ ಸ್ಥಾಪಿಸಿದ ಸ್ಥೂಪದಿಂದ ನಮ್ಮ ರಾಷ್ಟ್ರ ಲಾಂಛನವನ್ನು ಸ್ವೀಕರಿಸಲಾಗಿದೆ. ನಾಲ್ಕು ದಿಕ್ಕಿಗೆ ನೋಡುವ ನಾಲ್ಕು ಸಿಂಹಗಳು, ಬುಡದಲ್ಲಿ ಧರ್ಮ ಚಕ್ರ, ಸುತ್ತಲೂ ಆನೆ, ಕುದುರೆ, ಕೋಣ ಎಂಬೀ ರೂಪಗಳು ಇವೆ. ಕೆಳಗೆ 'ಸತ್ಯಮೇವ ಜಯತೇ' ಎಂದು ಬರೆದಿದೆ.




सत्यमेव जयते



ರಾಷ್ಟ್ರೀಯ ವೃಕ್ಷ



ರಾಷ್ಟ್ರೀಯ ಮೃಗ



ರಾಷ್ಟ್ರೀಯ ಪಕ್ಷಿ



ರಾಷ್ಟ್ರೀಯ ಪುಷ್ಪ


- ನಮ್ಮ ರಾಷ್ಟ್ರೀಯ ಸಂಕೇತಗಳ ಚಿತ್ರಗಳು ಮತ್ತು ಅವುಗಳ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಿರಿ. ಪರಿಸರಪುಸ್ತಕದಲ್ಲಿ ಬರೆಯಿರಿ.
    - ರಾಷ್ಟ್ರೀಯ ಹಣ್ಣು
    - ರಾಷ್ಟ್ರೀಯ ಆಟ
    - 

## ಕಲಿಕೆಯ ಪ್ರಧಾನ ಸಾಧನೆಗಳು

- ಭಾರತ ವೈವಿಧ್ಯತೆಗಳ ನಾಡಾಗಿದೆ ಎಂದು ವಿವರಿಸುತ್ತಾರೆ.
- ಭಾರತದ 29 ರಾಜ್ಯಗಳು, 6 ಕೇಂದ್ರಾಡಳಿತ ಪ್ರದೇಶಗಳು, ದೇಶದ ರಾಜಧಾನಿಯನ್ನು ಕಂಡುಹಿಡಿದು ಪಟ್ಟಿ ಮಾಡುತ್ತಾರೆ.
- ಪ್ರತಿಯೊಂದು ರಾಜ್ಯಕ್ಕೂ ಸಾಂಪ್ರದಾಯಿಕ ಕಲಾರೂಪ ಇದೆ ಎಂದು ವಿವರಿಸುತ್ತಾರೆ.
- ಭಾರತದಲ್ಲಿ ಹಲವು ಭಾಷೆಗಳಿವೆ ಎಂದು ತಿಳಿದು ಹೇಳುತ್ತಾರೆ.
- ಅನೇಕ ವೈವಿಧ್ಯಗಳಿದ್ದರೂ ನಾವು ಭಾರತೀಯರೆಂಬ ಭಾವನೆ ಹುಟ್ಟಿಸುವ ಹಲವಾರು ಸಾರ್ವತ್ರಿಕ ವಿಷಯಗಳನ್ನು ಅರಿತು ಪಟ್ಟಿ ಮಾಡುತ್ತಾರೆ.

## ಮೌಲ್ಯಮಾಪನ ಮಾಡೋಣ

ನೆರೆ ರಾಜ್ಯಗಳು ಹತ್ತಿರದ ಕೋಣೆಗಳಲ್ಲಿ ಬಾರದಂತೆ ಕೋಣೆಗಳನ್ನು ತುಂಬಿಸಿರಿ.





## ಮುಂದುವರಿದ ಚಟುವಟಿಕೆಗಳು

- ರಾಷ್ಟ್ರಧ್ವಜದ ಮಾದರಿಗಳನ್ನು ನಿರ್ಮಿಸೋಣ.
- ವಿವಿಧ ವಸ್ತುಗಳನ್ನು ಉಪಯೋಗಿಸಿ ಭಾರತದ ಭೂಪಟವನ್ನು ರಚಿಸಿರಿ.
- ದೇಶಭಕ್ತಿಗೀತೆಗಳನ್ನು ಸಂಗ್ರಹಿಸಿರಿ, ಹಾಡಿರಿ.
- ಭಾರತದ ವೈವಿಧ್ಯಗಳನ್ನು ಒಳಗೊಂಡ ಒಂದು ರಸಪ್ರಶ್ನೆ ಸ್ಪರ್ಧೆಗೆ ಅಗತ್ಯವಾದ ಪ್ರಶ್ನೆಗಳನ್ನು ತಯಾರಿಸಿರಿ.

10

# ಕಣ್ಣಿಗೆ ನಿಲುಕದ...ಕೈಗೆ ಎಟುಕದ... ದೂರದಲ್ಲಿ



ವೇಣು : ತಾತ, ಅಮೇರಿಕಾದಲ್ಲಿರುವ ಶಾಲಿನಿ ಅಕ್ಕನ ಮದುವೆ ಆಮಂತ್ರಣ ಬಂದಿದೆ.

ತಾತ : ಹೋ, ಯಾವಾಗ ಬಂದದ್ದು? ಪೋಸ್ಟ್‌ಮ್ಯಾನನ್ನು ಕಾಣಲಿಲ್ಲವಲ್ಲ.

ವೇಣು : ಇದೀಗ ಅಲ್ಲಿಂದ ಕಳುಹಿಸಿದ್ದಷ್ಟೆ.

ತಾತ : ಕಾಲದ ಬದಲಾವಣೆಯೇ, ಪತ್ರ ಕಳುಹಿಸಿದ ಕೂಡಲೇ ಇಲ್ಲಿಗೆ ತಲುಪಿತೇ?

ವೇಣು : ತಾತ, ಇದು ಇ–ಮೇಲ್.


ತಾತ : ಹಿಂದಿನ ಕಾಲದಲ್ಲಿ ಒಂದು ಪತ್ರ ಕಳುಹಿಸಿದರೆ ಸಿಗಲು ಬಹಳ ದಿವಸಗಳು ಬೇಕಾಗಿತ್ತು.

ವೇಣು : ಹೌದೇ ? ಯಾಕೆ ಹಾಗೆ?

ತಾತ : ಆ ಕಾಲದಲ್ಲಿ ಕಂಪ್ಯೂಟರ್ ಇರಲಿಲ್ಲ.

ವೇಣು : ತಾತ, ಆ ಕಾಲದಲ್ಲಿ ಮಾಹಿತಿಗಳನ್ನು ತಿಳಿಸುತ್ತಿದ್ದುದು ಹೇಗೆ?

ತಾತ : ಆ ಕಾಲದಲ್ಲಿ ಇಂದಿನಂತೆ ವಾರ್ತಾವಿನಿಮಯ ಮಾಧ್ಯಮಗಳು ಯಾವುದೂ ಇರಲಿಲ್ಲ. ಹಿಂದಿನ ಕಾಲದಲ್ಲಿ ಪಾರಿವಾಳಗಳ ಮೂಲಕ ಮಾಹಿತಿಗಳನ್ನು ರವಾನಿಸುತ್ತಿದ್ದರು. ಯುದ್ಧ ಕಾಲದಲ್ಲಿ ದಡದಿಂದ ಹಡಗಿಗೆ ಮಾಹಿತಿಗಳನ್ನು ರವಾನಿಸಲು ಪಾರಿವಾಳಗಳನ್ನು ಬಳಸುತ್ತಿದ್ದರು.



ಸಂದೇಶಗಳನ್ನು ಕಳುಹಿಸಲು ತರಬೇತಿ ನೀಡಿದ ಪಾರಿವಾಳಗಳನ್ನು ಬಳಸುತ್ತಿದ್ದರು. ಅವುಗಳು ಸಂದೇಶಗಳನ್ನು ತಲುಪಿಸಿದ ಬಳಿಕ ಹಿಂತಿರುಗುತ್ತಿದ್ದವು.



ಹಿಂದಿನಕಾಲದಲ್ಲಿ ಪಕ್ಷಿಗಳ ಹೊರತಾಗಿ ಮಾಹಿತಿಗಳನ್ನು ವಿನಿಮಯ ಮಾಡಲು ಬಳಸುತ್ತಿದ್ದ ಇತರ ವಿಧಾನಗಳು ಯಾವುವು?



ಡಂಗುರ



ದೂತ



ಅಂಚೆ ಓಟಗಾರ

ಚಿತ್ರಗಳನ್ನು ಗಮನಿಸಿರಿ....

ಪ್ರತಿಯೊಂದು ಚಿತ್ರದಲ್ಲಿರುವ ಜನರು ಸಂದೇಶಗಳನ್ನು ಹೇಗೆ ರವಾನೆ ಮಾಡುತ್ತಾರೆ?

ಮಾಹಿತಿಗಳನ್ನು ಹಸ್ತಾಂತರಿಸಲು ಪತ್ರಗಳಲ್ಲದೆ ಇತರ ಯಾವ ವಿಧಾನಗಳನ್ನು ಬಳಸುತ್ತಿದ್ದೇವೆ? ಪಟ್ಟಿಯನ್ನು ಪೂರ್ತಿಗೊಳಿಸಿರಿ.




- ಇ–ಮೇಲ್
- ---------------------
- ---------------------
- ---------------------
- ---------------------
- ---------------------
- ---------------------

ನೀವು ಬರೆದಿರುವುದರಲ್ಲಿ ಕೆಳಗೆ ಕೊಟ್ಟಿರುವ ಯಾವೆಲ್ಲಾ ವಾರ್ತಾವಿನಿಮಯ ಸೌಕರ್ಯಗಳಿವೆ?




ಟೀಚರೊಂದಿಗೆ ಚರ್ಚಿಸಿ ಅವುಗಳ ಹೆಸರು ಬರೆಯಿರಿ.

## ಬದಲಾವಣೆಗಳು.... ಬದಲಾವಣೆಗಳು....




ವಾರ್ತಾವಿನಿಮಯ ಕ್ಷೇತ್ರದಲ್ಲಿ ಬದಲಾವಣೆಗಳು ಉಂಟಾಗಲು ಕಾರಣಗಳು ಏನಾಗಿರಬಹುದು?

ನಿಮ್ಮ ಪರಿಸರಪುಸ್ತಕದಲ್ಲಿ ಬರೆಯಿರಿ....

> ವಾರ್ತೆಗಳನ್ನು ಹಸ್ತಾಂತರಿಸಲಿರುವ ವೇಗ, ಕಡಿಮೆ ಖರ್ಚು, ವಿನಿಮಯ ಸೌಕರ್ಯ ಎಂಬಿವುಗಳಿಗನುಸರಿಸಿ ದೊಡ್ಡ ಬದಲಾವಣೆಗಳು ಉಂಟಾಗುತ್ತಿವೆ.

## ಶ್ರವಣದಿಂದ ದೃಶ್ಯದೆಡೆಗೆ

ವಾರ್ತಾ ವಿನಿಮಯ ಕ್ಷೇತ್ರದಲ್ಲಿ ಪ್ರತಿನಿತ್ಯ ಬದಲಾವಣೆಗಳು ಉಂಟಾಗುತ್ತಿವೆಯಲ್ಲವೇ, ಇತ್ತೀಚೆಗಿನ ವರೆಗೆ ನಾವು ಉಪಯೋಗಿಸುತ್ತಿದ್ದ ಇಲೆಕ್ಟ್ರೋನಿಕ್ ಉಪಕರಣ ರೇಡಿಯೋ ಮಾತ್ರವಾಗಿತ್ತು.

ಹಾಗಾದರೆ ಇಂದೋ?

ಬದಲಾವಣೆಗಳನ್ನು ಮನಗಂಡು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| | |
|---|---|
| ರೇಡಿಯೋ | |
| ಪತ್ರ | ಇ–ಮೇಲ್ |
| ಟೆಲಿಫೋನ್ | |

# ನಾವು ವಾರ್ತಾ ವಿನಿಮಯ ಕ್ಷೇತ್ರದ ಮೈಲುಗಲ್ಲುಗಳು

## ವಾರ್ತಾಪತ್ರಿಕೆ




ಗೆಳೆಯರೇ...ನಾನು ಪ್ರಪಂಚದಲ್ಲಿ ಅತ್ಯಧಿಕ ಪ್ರಚಾರದಲ್ಲಿರುವ ವಾರ್ತಾ ವಿನಿಮಯ ಸಾಧನಗಳಲ್ಲಿ ಒಬ್ಬನಾಗಿದ್ದೇನೆ. ಪ್ರಪಂಚದ ಯಾವುದೇ ಮೂಲೆಯಲ್ಲಿ ನಡೆದ ಮಾಹಿತಿಗಳನ್ನು ನಿಮಗೆ ತಲುಪಿಸಲು ನನಗೆ ಸಾಧ್ಯ. ಹೊಸ ಹೊಸ ಮಾಹಿತಿಗಳೊಂದಿಗೆ ದಿನನಿತ್ಯ ನಿಮ್ಮನ್ನರಸಿ ತಲುಪುವ ನನ್ನನ್ನು ದಿನಪತ್ರಿಕೆ ಎಂದು ಕರೆಯುತ್ತಾರೆ.

## ಕಂಪ್ಯೂಟರ್



ನೀವು ಅತಿಹೆಚ್ಚು ಇಷ್ಟಪಡುವ ಇಲೆಕ್ಟ್ರೋನಿಕ್ ಉಪಕರಣವು ನಾನಲ್ಲವೇ....? ನಾನು ಅಗತ್ಯಕ್ಕನುಸರಿಸಿ ಶಬ್ದ, ಬರಹ, ಚಿತ್ರಗಳು, ವೀಡಿಯೋ ಮೊದಲಾದ ಎಲ್ಲಾ ಮಾಹಿತಿಗಳನ್ನು ನಿಮಗೆ ನೀಡುತ್ತಿದ್ದೇನೆ. ಮಾತ್ರವಲ್ಲದೆ ಅವುಗಳನ್ನು ಸಂರಕ್ಷಿಸಿ ಇಡಲೂ ಪುನಃ ನೀಡಲೂ ನಾನು ತಯಾರಿದ್ದೇನೆ. ನಾವು ಜೊತೆಯಾಗಿ ಹಲವು ಆಟಗಳನ್ನು ಆಡಿರುವುದು ನೆನಪಿದೆಯಲ್ಲವೇ. ನನಗೆ ನಿರಂತರವಾಗಿ ಬದಲಾವಣೆಗಳು ಬಂದುಕೊಂಡೇ ಇರುತ್ತವೆ. ಅದನ್ನು ತಿಳಿಯಲು ಪ್ರಯತ್ನಿಸಿರಿ...

## ಟೆಲಿಗ್ರಾಫ್



ನಿಮಗೆ ನನ್ನನ್ನು ಅಷ್ಟು ಪರಿಚಯವಿರಲಾರದು. ಕಾರಣ ನಾನು ಇಂದು ಇಲ್ಲ. ಆದರೆ ಬಹಳ ಸಮಯದ ವರೆಗೆ ಜನರು ತಕ್ಷಣದ ಮಾಹಿತಿ ರವಾನೆಗಾಗಿ ನನ್ನನ್ನು ಆಶ್ರಯಿಸಿದ್ದರು. ದೂರ ಎಂಬ ಅರ್ಥವಿರುವ 'ಟೆಲಿ', ಬರೆಯುವುದು ಎಂಬ ಅರ್ಥವಿರುವ 'ಗ್ರಾಫಿನ್' ಎಂಬೀ ಎರಡು ಗ್ರೀಕ್ ಪದಗಳು ಸೇರಿ ಟೆಲಿಗ್ರಾಮ್ ಎಂದು ನನಗೆ ಹೆಸರಿಟ್ಟರು. ಕೆಲವೊಮ್ಮೆಯಾದರೂ ನನ್ನನ್ನು ನೆನಪಿಸಿಕೊಳ್ಳಿರಿ... ನನ್ನ ಚರಿತ್ರೆಯನ್ನು ಅನ್ವೇಷಿಸಿ ತಿಳಿಯುವಿರಲ್ಲವೇ.....

## ರೇಡಿಯೋ



ಮಾರ್ಕೋನಿ ಎಂಬ ವಿಜ್ಞಾನಿ ನನ್ನನ್ನು ನಿಮಗೆ ಪರಿಚಯಿಸಿದನು. ವಾರ್ತೆಗಳನ್ನು ಶೀಘ್ರವಾಗಿ ಪ್ರಪಂಚದೆಲ್ಲೆಡೆ ತಲುಪಿಸಲು ನನಗೆ ಸಾಧ್ಯ. ಆದರೆ ನನಗೆ ಶಬ್ದವನ್ನು ಮಾತ್ರ ನೀಡಲು ಸಾಧ್ಯವಾಗುವುದು. ಆದರೂ ವೈಜ್ಞಾನಿಕ ಮತ್ತು ರಸವತ್ತಾದ ಅದೆಷ್ಟು ಕಾರ್ಯಕ್ರಮಗಳನ್ನು ಪ್ರತಿನಿತ್ಯ ನಿಮಗಾಗಿ ಸಿದ್ಧಪಡಿಸುತ್ತಿದ್ದೇನೆಂದು ತಿಳಿದಿದೆಯೇ? ಒಮ್ಮೆ ಆಲಿಸಿರಿ... ಮರೆಯದಿರಿ.

## ಟೆಲಿವಿಷನ್



ನಾನಿಂದು ನಿಮ್ಮ ಮನೆಯ ಒಬ್ಬ ಸದಸ್ಯನಿದ್ದಂತೆ. 'ಟೆಲಿ' ಎಂಬ ಗ್ರೀಕ್ ಪದ ಮತ್ತು 'ವಿಷನ್' ಎಂಬ ಲ್ಯಾಟಿನ್ ಪದ ಸೇರಿ ನನ್ನ ಹೆಸರಾಯಿತು. ನಾನು ವಾರ್ತೆಗಳು, ವಿಜ್ಞಾನ, ಮನೋರಂಜನೆ ಮೊದಲಾದ ಅನೇಕ ವಿಶೇಷತೆಗಳೊಂದಿಗೆ ನಿಮ್ಮ ಮುಂದೆ ಬರುತ್ತಿದ್ದೇನೆ.



## ಇಂಟರ್‌ನೆಟ್

ಪ್ರಪಂಚದ ಎಲ್ಲಾ ಪ್ರದೇಶಗಳಲ್ಲಿರುವ ಕಂಪ್ಯೂಟರ್‌ಗಳನ್ನು ಪರಸ್ಪರ ಬಂಧಿಸಿ ಮಾಹಿತಿಗಳನ್ನು ಹಸ್ತಾಂತರಿಸಲು ನನಗೆ ಸಾಧ್ಯ. ಪರಸ್ಪರ ನೋಡಿ ಮಾತನಾಡಲು ಮತ್ತು ವೀಡಿಯೋ ಕಾನ್ಫರೆನ್ಸ್ ನಡೆಸಲು ನನಗೆ ಸಾಧ್ಯ. ಈಗ ನಿಮಗೆ ತಿಳಿಯಿತಲ್ಲವೇ? 'ವಿಜ್ಞಾನ ಬೆರಳ ತುದಿಯಲ್ಲಿ' ಎಂಬ ಮಾತು ನನಗೆ ಚೆನ್ನಾಗಿ ಅನ್ವಯಿಸುತ್ತದೆ!





## ಫಾಕ್ಸ್

ಚಿತ್ರಗಳು ಮತ್ತು ಮಾಹಿತಿಗಳೊಂದಿಗೆ ನನಗೆ ನೀಡಿದ ಯಾವುದೇ ಸಂದೇಶದ ಯಥಾಪ್ರತಿಯನ್ನು ಪ್ರಪಂಚದ ಯಾವ ದೇಶಕ್ಕೆ ಬೇಕಾದರೂ ತಲುಪಿಸಲು ನನಗೆ ಸಾಧ್ಯ. ಅದರೊಂದಿಗೆ ಫೋನ್ ಸಂದೇಶಗಳನ್ನು ವರ್ಗಾಯಿಸಲು ಸಾಧ್ಯವಿದೆ. ನನ್ನ ಹೆಸರು ಫಾಕ್ಸ್.

## ಟೆಲಿಫೋನ್




"ಮಿಸ್ಟರ್ ವಾಟ್ಸನ್....ಇಲ್ಲಿಗೆ ಬನ್ನಿ.....
ನನಗೆ ನಿಮ್ಮ ಸಹಾಯ ಬೇಕು ...."

ಇದು ನನ್ನ ಮೊದಲ ಶಬ್ದವಾಗಿದೆ. ನಾನು 1876 ಮಾರ್ಚ್ 10ರಂದು ಹುಟ್ಟಿದೆನು. ಅಲೆಕ್ಸಾಂಡರ್ ಗ್ರಹಾಂಬೆಲ್ ಎಂಬ ಶ್ರೇಷ್ಠ ವಿಜ್ಞಾನಿ ನನ್ನನ್ನು ಪ್ರಪಂಚಕ್ಕೆ ಪರಿಚಯಿಸಿದನು. ಇಂದು ನನ್ನ ಗೆಳೆಯರು ಹಲವರು ಇದ್ದಾರೆ...ಇಂದು ನಾವು ನಿಮಗೆ ಒದಗಿಸುವ ಸೇವೆಗಳು ಯಾವುವೆಂದು ಒಮ್ಮೆ ಯೋಚಿಸಿರಿ....

## ವಾಕಿಟಾಕಿ

ನಿಮಗೆ ನನ್ನ ಪರಿಚಯ ಇದೆಯೇ? ನನ್ನನ್ನು ನೀವು ಪೋಲೀಸರ ಕೈಯಲ್ಲಿ ಕಂಡಿರಬಹುದು. ಅವರು ನನ್ನನ್ನು ಹೆಚ್ಚಾಗಿ ಬಳಸುತ್ತಾರೆ. ದೇಶದ ಸುರಕ್ಷತೆ ಹಾಗೂ ಶಾಂತಿಪಾಲನೆಗಾಗಿ ನಾನು ಸದಾ ಜಾಗ್ರತನಾಗಿದ್ದೇನೆ. ನಾನು ಎರಡೂ ಕಡೆಗಳಿಂದ ಮಾತನಾಡಲೂ ತೆಗೆದುಕೊಂಡು ಹೋಗಲೂ ಸಾಧ್ಯವಿರುವ ಮೊದಲ ಉಪಕರಣ.





## ಮೊಬೈಲ್ ಫೋನ್

ಹಲೋ....
ಒಮ್ಮೆ ನೋಡಿ....
ನಾನಿಂದು ಸಂಪೂರ್ಣ ಸ್ಮಾರ್ಟ್ ಆಗಿದ್ದೇನೆ ಅಲ್ಲವೇ? ಹೌದು...ನಿಮ್ಮ ಆತ್ಮೀಯ ಮಿತ್ರ ಫೋನ್ ಕರೆಯಲು ಮಾತ್ರವಲ್ಲದೆ ಸಂದೇಶಗಳನ್ನು ಕಳುಹಿಸಲು, ಫೋಟೋ ತೆಗೆಯಲು, ವೀಡಿಯೋ ಗೇಮ್ ಮೊದಲಾದ ನಿಮಗೆ ಬೇಕಾದ ಎಲ್ಲಾ ಸೌಕರ್ಯಗಳನ್ನು ನೀಡಲು ನಾನು ಸಿದ್ಧನಾಗಿದ್ದೇನೆ. ಇಂಟರ್‌ನೆಟ್ ಬಳಸಲೂ ನನಗೆ ಸಾಧ್ಯ. ಪರಸ್ಪರ ನೋಡಿ ಮಾತನಾಡಲು ಸಾಧ್ಯವಿರುವ ನನ್ನ ನೂತನ ಆವಿಷ್ಕಾರದ ಬಗ್ಗೆ ನಿಮಗೆ ತಿಳಿದಿರಬಹುದಲ್ಲವೇ?

## ಕ್ರಮೀಕರಿಸಿರಿ

ಚಿತ್ರಗಳನ್ನು ನೋಡಿ ಉಪಯೋಗದಲ್ಲಿ ಬಂದ ಬದಲಾವಣೆಗಳ ಆಧಾರದಲ್ಲಿ ಕ್ರಮೀಕರಿಸಿರಿ.






| | | | |
|---|---|---|---|
| | | | |

## ವರ್ಗೀಕರಿಸಿರಿ.

ಸಂದೇಶಗಳನ್ನು ರವಾನಿಸಲಿರುವ ಸ್ವಭಾವವನ್ನು ಅನುಸರಿಸಿ ಕೆಳಗೆ ಕೊಟ್ಟಿರುವ ಸಾಧನಗಳನ್ನು ವರ್ಗೀಕರಿಸಿ ಪಟ್ಟಿ ಮಾಡಿರಿ.

| | | | | | |
|---|---|---|---|---|---|
| ಫೋನ್ | ವಾರ್ತಾಪತ್ರಿಕೆ | ರೇಡಿಯೋ | ಇ–ಮೇಲ್ | ಟೆಲಿವಿಷನ್ | ಫಾಕ್ಸ್ |

| ವೈಯಕ್ತಿಕ ಮಾಹಿತಿ ವಿನಿಮಯ | ಸಾಮೂಹಿಕ ಮಾಹಿತಿ ವಿನಿಮಯ |
|---|---|
| • ಫೋನ್ | • ವಾರ್ತಾಪತ್ರಿಕೆ |
| • | • |
| • | • |
| • | • |


ಒಂದು ಸಂದೇಶವನ್ನು ಒಂದು ಗುಂಪು ಜನರಿಗೆ ಏಕಕಾಲದಲ್ಲಿ ವರ್ಗಾಯಿಸುವ ವ್ಯವಸ್ಥೆಗಳಿಗೆ ಸಮೂಹ ಮಾಧ್ಯಮಗಳು ಎಂದು ಹೇಳುವರು.




ಇತ್ತೀಚೆಗಿನ ವರೆಗೆ ಉಪಯೋಗಿಸಿದ್ದ ಕೆಲವು ವಾರ್ತಾ ವಿನಿಮಯ ಉಪಕರಣಗಳು ಇಂದಿಲ್ಲ. ಯಾಕೆ?

ಇಂದು ವಾರ್ತಾ ವಿನಿಮಯ ವ್ಯವಸ್ಥೆಗಳು ಹಲವು ಕ್ಷೇತ್ರಗಳಿಗೆ ವ್ಯಾಪಿಸಿವೆ.

## ಯಾವುವು? ಹೇಗೆ?








ಇವುಗಳನ್ನು ಬಳಸುವ ಇತರ ಕ್ಷೇತ್ರಗಳು ಯಾವುವು?

ಅನ್ವೇಷಿಸಿ ತಿಳಿಯಿರಿ.

- ನೇರ ಪ್ರಸಾರ
- 
- 

## ನಿಮಗೆ ತಿಳಿದಿದೆಯೇ?



ಮೊಬೈಲ್ ಫೋನ್‌ನ ಮೂಲಕ ಧ್ವನಿ ಶ್ರೋತೃವಿಗೆ ತಲುಪುವುದು ಹೇಗೆ?

ಮಾಹಿತಿ ತಂತ್ರಜ್ಞಾನವು ದಿನದಿಂದ ದಿನಕ್ಕೆ ಅಭಿವೃದ್ಧಿಯಾಗುತ್ತಿದೆ. ಹವಾಮಾನ ಬದಲಾವಣೆಗಳು, ಪ್ರಕೃತಿ ವಿಕೋಪಗಳೇ ಮೊದಲಾದುವುಗಳ ಮುನ್ಸೂಚನೆಗಳನ್ನು ಅರಿಯಲು ಇದು ನಮಗೆ ಸಹಾಯಕವಾಗುತ್ತದೆ. ಪ್ರಪಂಚದ ಯಾವುದೇ ಭಾಗದಿಂದಿರುವ ಮಾಹಿತಿಗಳನ್ನು ನಮ್ಮ ಮನೆಯಲ್ಲಿ ಕುಳಿತುಕೊಂಡು ತಿಳಿಯುವುದಕ್ಕೂ ಮಾಹಿತಿಗಳನ್ನು ಇತರರಿಗೆ ತಿಳಿಸುವುದಕ್ಕೂ ಮಾಹಿತಿ ತಂತ್ರಜ್ಞಾನವನ್ನು ಬಳಸಲಾಗುತ್ತದೆ.




## ಕಲಿಕೆಯ ಪ್ರಧಾನ ಸಾಧನೆಗಳು

- ಹಿಂದಿನ ಕಾಲದ ವಾರ್ತಾವಿನಿಮಯ ವಿಧಾನಗಳನ್ನು ತಿಳಿದುಕೊಂಡು ವಿವರಿಸುತ್ತಾರೆ.
- ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕ್ರಮಾಗತವಾಗಿ ಉಂಟಾಗುವ ಬೆಳವಣಿಗೆಯನ್ನು ತಿಳಿದುಕೊಂಡು ವಿವರಿಸುತ್ತಾರೆ.
- ಮಾಹಿತಿ ತಂತ್ರಜ್ಞಾನದ ಆಧುನಿಕ ವ್ಯವಸ್ಥೆಗಳ ಬಗ್ಗೆ ಟಿಪ್ಪಣಿ ತಯಾರಿಸುತ್ತಾರೆ.
- ವಿವಿಧ ವಾರ್ತಾ ಮಾಧ್ಯಮಗಳನ್ನು ಅವುಗಳ ವಿಶೇಷತೆಗಳಿಗನುಸಾರವಾಗಿ ವಿಂಗಡಿಸುತ್ತಾರೆ.



## ಮೌಲ್ಯಮಾಪನ ಮಾಡೋಣ

1. ಹಿಂದಿನ ಕಾಲದಲ್ಲಿ ಮಾಹಿತಿ ರವಾನೆಗೆ ಉಪಯೋಗಿಸುತ್ತಿದ್ದ ಪಕ್ಷಿ ಯಾವುದು?

   1. ಗಿಡುಗ 2. ಪಾರಿವಾಳ 3. ಕೋಗಿಲೆ

2. ವಾರ್ತೆಗಳನ್ನು ಕೇಳಲು ಮತ್ತು ಕಾಣಲು ಸಾಧ್ಯವಾಗುವ ಮಾಧ್ಯಮ ಯಾವುದು?

   1. ರೇಡಿಯೋ 2. ದೂರದರ್ಶನ 3. ವಾರ್ತಾಪತ್ರಿಕೆ

3. ನಿಮಗೆ ತಿಳಿದಿರುವ ವಾರ್ತಾಪತ್ರಿಕೆಗಳ ಹೆಸರುಗಳನ್ನು ಬರೆಯಿರಿ.
4. ಹಿಂದಿನ ಕಾಲದ ವಾರ್ತಾವಿನಿಮಯ ಉಪಕರಣಗಳ ಇತಿಮಿತಿಗಳು ಯಾವುವು ?
5. ಲ್ಯಾಂಡ್‌ಫೋನ್ ಮತ್ತು ಮೊಬೈಲ್ ಫೋನುಗಳ ಹಿರಿಮೆಗಳನ್ನು ಮತ್ತು ಮಿತಿಗಳನ್ನು ಪಟ್ಟಿ ಮಾಡಿರಿ.

## ಕಂಡುಹಿಡಿಯೋಣ

ಈ ಕೆಳಗಿನ ಸಂದರ್ಭಗಳಲ್ಲಿ ಬಳಸಲು ಸೂಕ್ತವಾದ ವಾರ್ತಾ ವಿನಿಮಯ ಉಪಕರಣ ಯಾವುದು?

- ಸಮುದ್ರದಲ್ಲಿ ಏಕಾಂಗಿಯಾದ ಬೆಸ್ತ ಇತರರನ್ನು ಸಂಪರ್ಕಿಸಲು.
- ಹವಾಮಾನ ಮುನ್ಸೂಚನೆಯನ್ನು ಆಲಿಸಲು.
- ಭಾರತ ಮತ್ತು ಶ್ರೀಲಂಕಾ ದೇಶಗಳ ನಡುವೆ ನಡೆಯುವ ಕ್ರಿಕೆಟ್ ಪಂದ್ಯಾಟದ ನೇರಪ್ರಸಾರವನ್ನು ವೀಕ್ಷಿಸಲು.



## ಮುಂದುವರಿದ ಚಟುವಟಿಕೆಗಳು

1. ಅಂಚೆಚೀಟಿ ಸಂಗ್ರಹ.
2. ಟೆಲಿ ಕಾನ್ಫರೆನ್ಸಿಂಗ್ ಮತ್ತು ವೀಡಿಯೋ ಕಾನ್ಫರೆನ್ಸಿಂಗ್ (ಮುಖ್ಯೋಪಾಧ್ಯಾಯರು ಮತ್ತು ಮಕ್ಕಳ ನಡುವೆ).
3. ಆಟಿಕೆ ಫೋನ್ ನಿರ್ಮಾಣ.
4. ಟೆಲಿಫೋನ್ ಎಕ್ಸ್ಚೇಂಜ್‌ಗೆ ಭೇಟಿನೀಡಿ ಮಾಹಿತಿ ವಿನಿಮಯ ಮಾಡುವುದು ಹೇಗೆಂದು ತಿಳಿದುಕೊಳ್ಳಿರಿ.
5. ರೇಡಿಯೋದಲ್ಲಿ ಕನ್ನಡ ಮತ್ತು ಇಂಗ್ಲೀಷ್ ವಾರ್ತೆಗಳನ್ನು ಆಲಿಸಿರಿ.
6. ಮಕ್ಕಳ ಆಕಾಶವಾಣಿ.
7. ಶಾಲೆಯಲ್ಲೊಂದು ಅಂಚೆ ಕಛೇರಿ.


# 11

# ಗೆಳೆಯರಿಗೊಂದು ಮುಂಜಾಗ್ರತೆ



ಚಿತ್ರವನ್ನು ಗಮನಿಸಿದಿರಲ್ಲವೇ?

ಈ ಅಪಘಾತವನ್ನು ನೀವು ನೋಡುತ್ತಿದ್ದರೆ ಏನು ಮಾಡುತ್ತಿದ್ದಿರಿ?




ವಾರ್ತೆಗಳ ಶೀರ್ಷಿಕೆಗಳನ್ನು ಗಮನಿಸಿರಿ.


ಅಪಘಾತಕ್ಕೊಳಗಾದವರಿಗೆ ನಾವು ಸಹಾಯ ಮಾಡುತ್ತೇವೆಯೇ?

ಇಂತಹ ಸಂದರ್ಭಗಳಲ್ಲಿ ನಾವೇನು ಮಾಡಬಹುದು?

- ಆಸ್ಪತ್ರೆಗೆ ತಲುಪಿಸಬಹುದು.
- ಹಿರಿಯರಿಗೆ ತಿಳಿಸಬಹುದು.
- ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬಹುದು.
- 
- 

ನಿಮಗೋ ಗೆಳೆಯರಿಗೋ ಎಂದಾದರು ಅಪಘಾತ ಸಂಭವಿಸಿದೆಯೇ?

ಸಾಮಾನ್ಯವಾಗಿ ಸಂಭವಿಸಬಹುದಾದ ಅಪಘಾತಗಳು ಯಾವುವು? ಬರೆಯಿರಿ.



## ನಾವೂ ಸಹಾಯ ಮಾಡೋಣ

ಅಪಘಾತಕ್ಕೆ ಒಳಗಾದವರಿಗೆ ಆಸ್ಪತ್ರೆಗೆ ದಾಖಲಿಸುವ ಮೊದಲು ಶುಶ್ರೂಷೆ ನೀಡುವುದು ಅಗತ್ಯವಲ್ಲವೇ?

ಅಪಘಾತಕ್ಕೆ ಒಳಗಾದವರಿಗೆ ವೈದ್ಯ ಸಹಾಯ ದೊರೆಯುವ ತನಕ ಮಾಡುವ ಶುಶ್ರೂಷೆಯೇ ಪ್ರಥಮ ಚಿಕಿತ್ಸೆ.

## ಪ್ರಥಮ ಚಿಕಿತ್ಸೆ

ಪ್ರಥಮ ಚಿಕಿತ್ಸೆ ನೀಡುವುದರಿಂದಿರುವ ಪ್ರಯೋಜನಗಳು ಯಾವುವು?

- ಅಪಘಾತದ ತೀವ್ರತೆ ಹೆಚ್ಚಾಗದಿರಲು
-



ಪ್ರಥಮ ಚಿಕಿತ್ಸೆ ನೀಡುವವನ ಕರ್ತವ್ಯಗಳು ಯಾವುವು?

- ಅಪಘಾತಕ್ಕೊಳಗಾದವನನ್ನು ಸಾಂತ್ವನ ಪಡಿಸುವುದು.
- ಅಗತ್ಯವಿದ್ದಲ್ಲಿ ಆದಷ್ಟು ಬೇಗನೆ ವೈದ್ಯ ಸಹಾಯ ಲಭಿಸುವಂತೆ ಮಾಡುವುದು.
-

ಪ್ರತಿಯೊಂದು ಅಪಘಾತದ ಸಂದರ್ಭದಲ್ಲೂ ಕೈಗೊಳ್ಳಬೇಕಾದ ಪ್ರಥಮ ಚಿಕಿತ್ಸೆಯ ಬಗ್ಗೆ ಸರಿಯಾದ ಮಾಹಿತಿ ನಮಗೆ ತಿಳಿದಿರಬೇಕಲ್ಲವೇ?

## ಗಾಯಗಳು

ನಿಮಗೆ ಎಂದಾದರೂ ಗಾಯವಾಗಿದೆಯೇ?

ಸಣ್ಣಪುಟ್ಟ ಗಾಯಗಳಾದಲ್ಲಿ ಏನು ಮಾಡುತ್ತೀರಿ?

- ಗಾಯಗೊಂಡ ಭಾಗವನ್ನು ಶುದ್ಧವಾದ ನೀರಿನಿಂದ ಶುಚಿಯಾಗಿ ತೊಳೆಯಬೇಕು.
- ಗಾಯಗೊಂಡ ಭಾಗವನ್ನು ಮೇಲಕ್ಕೆ ಎತ್ತಿ ಹಿಡಿಯಬೇಕು.



- ರಕ್ತಸ್ರಾವವಾಗದಂತೆ ಮಾಡಲು ಗಾಯಗೊಂಡ ಭಾಗವನ್ನು ಶುಚಿಯಾದ ಬಟ್ಟೆಯಿಂದ ಒತ್ತಿ ಹಿಡಿಯಬೇಕು.
- ಗಾಯದಲ್ಲಿ ಹೆಪ್ಪುಗಟ್ಟಿದ ರಕ್ತವನ್ನು ನೀಗಿಸಬಾರದು.
- ಗಾಯವಾದ ಭಾಗವನ್ನು ಗಾಳಿಗೆ ತೆರೆದಿರಿಸುವುದು ರೋಗಾಣುಗಳ ಸೋಂಕುವಿಕೆಗೆ ಕಾರಣವಾಗಬಹುದು.
- ದೊಡ್ಡ ಗಾಯಗಳಾಗಿದ್ದರೆ ಗಾಯಗೊಂಡ ವ್ಯಕ್ತಿಯನ್ನು ಸೌಕರ್ಯಪ್ರದವಾದ ರೀತಿಯಲ್ಲಿ ಕುಳಿತುಕೊಳ್ಳಿಸಬೇಕು ಅಥವಾ ಮಲಗಿಸಬೇಕು.
- ಗಾಯಗೊಂಡ ವ್ಯಕ್ತಿಯನ್ನು ಆದಷ್ಟು ಬೇಗನೆ ಆಸ್ಪತ್ರೆಗೆ ತಲುಪಿಸಬೇಕು.
- 

ಪ್ರಥಮ ಚಿಕಿತ್ಸೆ ಮಾಡುವವನು ಚೆನ್ನಾಗಿ ಕೈಗಳನ್ನು ತೊಳೆದಿರಬೇಕೆಂದು ಹೇಳಲು ಕಾರಣವೇನು?

## ಮೂಗಿನಿಂದ ರಕ್ತ ಬಂದಾಗ...




- ಎದುರಿಗೆ ಬಾಗಿಸಿ ಕುಳಿತುಕೊಳ್ಳಿಸಬೇಕು.
- ಮೂಗಿನ ತುದಿಭಾಗವನ್ನು ಹೆಬ್ಬೆರಳು ಮತ್ತು ತೋರುಬೆರಳುಗಳಿಂದ ಒತ್ತಿಹಿಡಿಯಬೇಕು.
- ಬಾಯಿಯ ಮೂಲಕ ಉಸಿರಾಡಲು ಸೂಚಿಸಬೇಕು.
- ಮಾತನಾಡದಿರುವಂತೆ ಸೂಚಿಸಬೇಕು.
- ವೈದ್ಯರ ಸಹಾಯವನ್ನು ಪಡೆದುಕೊಳ್ಳಬೇಕು.

## ಕಣ್ಣಿಗೆ ಧೂಳು ಬಿದ್ದಾಗ...



ಕಣ್ಣಿಗೆ ಧೂಳು ಬೀಳುವುದು ಸಾಮಾನ್ಯವಾಗಿದೆ. ಕಣ್ಣಿಗೆ ಧೂಳು ಬಿದ್ದರೆ ತಿಕ್ಕಬಾರದೆಂದು ಹೇಳುವುದು ಯಾಕೆ?

ಕಣ್ಣಿಗೆ ಬಿದ್ದ ಧೂಳನ್ನು ತೆಗೆಯುವುದು ಹೇಗೆ?



ಕಣ್ಣಿಗೆ ಸಾಕಷ್ಟು ಶುದ್ಧ ನೀರನ್ನು ಧಾರೆ ಎರೆದು ಅಥವಾ ಶುಚಿಯಾದ, ಒದ್ದೆಯಾದ ಕರವಸ್ತ್ರದ ತುದಿಯನ್ನು ಉಪಯೋಗಿಸಿ ತೆಗೆಯಲು ಸಾಧ್ಯವಿಲ್ಲವೇ? ಕಣ್ಣಿಗೆ ಚುಚ್ಚಿದ ವಸ್ತುಗಳನ್ನು ನಾವೇ ತೆಗೆಯಲು ಪ್ರಯತ್ನಿಸದೆ ಆದಷ್ಟು ಬೇಗನೆ ವೈದ್ಯರ ಸಹಾಯ ಲಭಿಸುವಂತೆ ಮಾಡಬೇಕು.

## ಉಳುಕು

ಆಡುವಾಗಲೋ, ಮೆಟ್ಟಿಲುಗಳನ್ನು ಇಳಿಯುವಾಗಲೋ ನಿಮ್ಮ ಕಾಲುಗಳು ಯಾವಾಗಲಾದರೂ ಉಳುಕಿದೆಯೇ?

ಉಳುಕಿದರೆ ನೀವೇನು ಮಾಡುವಿರಿ?

- ಉಳುಕಿದ ಭಾಗವನ್ನು ಅಲುಗಾಡಿಸದೆ ಎತ್ತರದಲ್ಲಿರಿಸಬೇಕು.
- ನೋವು ಕಡಿಮೆಯಾಗಲು ಐಸ್‌ಪ್ಯಾಕ್ ಇಡಬೇಕು.



**ಐಸ್ ಪ್ಯಾಕ್**

ಒಂದು ಪ್ಲಾಸ್ಟಿಕ್ ಕವರಿನಲ್ಲಿ ಐಸ್ ಹಾಕಿದ ನಂತರ ನೀರನ್ನು ಸೇರಿಸಿ ಅದರ ಮೇಲೆ ಶುಚಿಯಾದ ಬಟ್ಟೆಯನ್ನು ಹೊದೆಸಿದರೆ ಅದನ್ನು ಐಸ್‌ಪ್ಯಾಕ್ ಆಗಿ ಉಪಯೋಗಿಸಬಹುದು.

## ಜಜ್ಜಿ ಹೋಗುವುದು

ಭಾರವಾದ ವಸ್ತುಗಳು ದೇಹದ ಮೇಲೆ ಬಿದ್ದರೆ ಜಜ್ಜುವಿಕೆ ಉಂಟಾಗುವುದಲ್ಲವೇ?

ಜಜ್ಜುವಿಕೆಗೆ ನೀಡಬೇಕಾದ ಪ್ರಥಮ ಚಿಕಿತ್ಸೆ ಯಾವುದು?

ನೋವು ಮತ್ತು ಊತ ಇಲ್ಲದಂತೆ ಮಾಡಲು ಒದ್ದೆ ಬಟ್ಟೆಯನ್ನೋ ಐಸ್‌ಪ್ಯಾಕನ್ನೋ ಜಜ್ಜಿ ಹೋದ ಭಾಗದಲ್ಲಿರಿಸಬಹುದು.

- ಶಾಖಕೊಡುವುದೋ ತಿಕ್ಕುವುದೋ ಮಾಡಬಾರದು.

## ಮೂರ್ಛೆಹೋಗುವುದು

ಮೈದಾನದಲ್ಲಿ ಆಟವಾಡುತ್ತಿದ್ದ ಗೆಳೆಯ ಮೂರ್ಛೆಹೋದರೆ ನೀವೇನು ಮಾಡುವಿರಿ?

- ತಲೆ ಸುತ್ತುತ್ತದೆಯೆಂದು ತಿಳಿದರೆ ಕೂಡಲೇ ಮಲಗಲು ಸೌಕರ್ಯ ಒದಗಿಸಬೇಕು.
- ಮಲಗಿಸಿದ ಮೇಲೆ ಕಾಲುಗಳನ್ನು ಎತ್ತರದಲ್ಲಿ ಇಡಬೇಕು.
- ಉಡುಪುಗಳು ಬಿಗಿಯಾಗಿದ್ದರೆ ಸಡಿಲಗೊಳಿಸಬೇಕು.
- ಸುತ್ತಲೂ ಜನರು ಒಗ್ಗೂಡಿ ನಿಲ್ಲದೆ ಶುದ್ಧಗಾಳಿ ಲಭಿಸುವಂತೆ ಮಾಡಬೇಕು.


## ಅಸ್ಥಿಭಂಗ

ಅಪಘಾತಕ್ಕೊಳಗಾದಾಗ ಕೆಲವೊಮ್ಮೆ ಎಲುಬಿಗೆ ಬಿರುಕು ಉಂಟಾಗುವುದು, ಆದರೆ ಸುತ್ತಲಿರುವ ಶರೀರದ ಇತರ ಭಾಗಗಳಿಗೆ ಹಾನಿಯುಂಟಾಗುವುದಿಲ್ಲ.

ಕೆಲವು ಸಂದರ್ಭಗಳಲ್ಲಿ ತುಂಡಾದ ಎಲುಬು ಮಾಂಸವನ್ನು ಭೇದಿಸಿ ಹೊರಗೆ ಬರುವುದೂ ಇದೆ.

ಈ ಸಂದರ್ಭದಲ್ಲಿ ರಕ್ತಸ್ರಾವವನ್ನು ನಿಲ್ಲಿಸಲು ಮತ್ತು ಗಾಯವಾದ ಭಾಗಕ್ಕೆ ರೋಗಾಣುಗಳು ಪ್ರವೇಶಿಸದಂತೆ ಎಚ್ಚರಿಕೆವಹಿಸಬೇಕು.

ಆದಷ್ಟು ಬೇಗನೆ ವೈದ್ಯರ ಸಹಾಯ ಲಭಿಸುವಂತೆಯೂ ಗಮನಿಸಬೇಕು.






ತುಂಡಾದ ಭಾಗವನ್ನು ಅಲುಗಾಡಿಸಲು ಸಾಧ್ಯವಾಗದಂತೆ ಮಾಡಿದ ಬಳಿಕವೇ ಅಪಘಾತಕ್ಕೊಳಗಾದ ವ್ಯಕ್ತಿಯನ್ನು ಅಲ್ಲಿಂದ ಸ್ಥಳಾಂತರಿಸಬಹುದು. ಅದಕ್ಕಾಗಿ ಸ್ಪ್ಲಿಂಟ್ ಉಪಯೋಗಿಸಬಹುದು.

**ಸ್ಪ್ಲಿಂಟ್**

ಮೂಳೆ ಮುರಿದ ಭಾಗವನ್ನು ಕಟ್ಟುವಾಗ ಮುರಿದ ಭಾಗದ ಮೇಲೆ ಮತ್ತು ಕೆಳಗೆ ಇರುವ ಸಂಧಿಗಳು ಅಲುಗಾಡದಿರಲು ಸ್ಪ್ಲಿಂಟನ್ನು ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ಸ್ಕೇಲು ಅಥವಾ ಹಗುರವಾದ ಮರದ ತುಂಡು ಇಲ್ಲವೇ ಕಾರ್ಡ್‌ಬೋರ್ಡ್ ಇತ್ಯಾದಿಗಳನ್ನು ಇದಕ್ಕಾಗಿ ಉಪಯೋಗಿಸಬಹುದು.



## ಆಹಾರಪದಾರ್ಥ ಗಂಟಲಿನಲ್ಲಿ ಸಿಲುಕಿದರೆ

ಆಹಾರಪದಾರ್ಥಗಳು ಗಂಟಲಿನಲ್ಲಿ ಸಿಲುಕಿಕೊಳ್ಳುವುದು ಅಪಾಯಕರವಾಗಿದೆ. ಈ ಸಂದರ್ಭದಲ್ಲಿ ತಕ್ಷಣ ಒದಗಿಸುವ ಪ್ರಥಮ ಚಿಕಿತ್ಸೆಯಿಂದ ಜೀವವನ್ನು ಉಳಿಸಲು ಸಾಧ್ಯವಾಗಬಹುದು.


ಒಂದು ಕೈಯಿಂದ ಹೊಟ್ಟೆಯ ಮೇಲ್ಭಾಗವನ್ನು ಒತ್ತಿ ಹಿಡಿದು ಅದೇ ವೇಳೆ ಇನ್ನೊಂದು ಕೈಯಿಂದ ಬೆನ್ನಿಗೆ ಬಲವಾಗಿ ಹೊಡೆಯಬೇಕು. 3ರಿಂದ 5 ಬಾರಿ ಹೀಗೆ ಆವರ್ತಿಸಿದ ನಂತರವೂ ಆಹಾರ ಪದಾರ್ಥವು ಹೊರಗೆ ಬಾರದಿದ್ದರೆ ಕೂಡಲೆ ವೈದ್ಯರ ಸಹಾಯವನ್ನು ಪಡೆದುಕೊಳ್ಳಬೇಕು.





## ಸುಡುವಿಕೆ ಉಂಟಾದರೆ

ನಿಮಗೆ ಎಂದಾದರೂ ಸುಡುವಿಕೆ ಉಂಟಾಗಿದೆಯೇ? ಸುಡುವಿಕೆ ಉಂಟಾಗುವ ಸಂದರ್ಭಗಳು ಯಾವುವು?



- ಆಮ್ಲ ದೇಹಕ್ಕೆ ಬಿದ್ದು.
- 
- 

ಸುಡುವಿಕೆ ಉಂಟಾದರೆ ಏನು ಮಾಡಬೇಕು?

- ಸುಟ್ಟಭಾಗಕ್ಕೆ ನಿರಂತರವಾಗಿ ತಣ್ಣೀರು ಎರೆಯಬೇಕು.
- ತೀವ್ರವಾದ ಸುಡುವಿಕೆ ಉಂಟಾದ ಭಾಗದಲ್ಲಿ ಐಸ್ ಇಡಬಾರದು.
- ಸುಟ್ಟಭಾಗದಲ್ಲಿ ಅಂಟಿಕೊಂಡಿರುವ ವಸ್ತುಗಳನ್ನು ತೆಗೆಯಲು ಪ್ರಯತ್ನಿಸಬಾರದು.
- ಔಷಧವೆಂಬ ನೆಪದಲ್ಲಿ ಸುಟ್ಟಭಾಗಕ್ಕೆ ಯಾವುದನ್ನೂ ಹಚ್ಚಬಾರದು.

## ಬಟ್ಟೆಗೆ ಬೆಂಕಿ ಹಿಡಿದರೆ



- ನೀರೆರೆದು ಬೆಂಕಿಯನ್ನು ನಂದಿಸಲು ಪ್ರಯತ್ನಿಸಬೇಕು.
- ನೆಲದ ಮೇಲೆ ಮಲಗಿ ಹೊರಳಾಡುವುದು ಬೆಂಕಿಯನ್ನು ನಂದಿಸಲು ಸಹಾಯಕವಾಗುವುದು.
- ದಿಗ್ಭ್ರಾಂತರಾಗಿ ಓಡಲು ಬಿಡಬಾರದು; ಗಾಳಿಯಲ್ಲಿ ಬೆಂಕಿ ಹೊತ್ತಿ ಉರಿಯುವುದು.
- ದಪ್ಪವಾದ ಹೊದಿಕೆ ಅಥವಾ ಗೋಣಿಚೀಲವನ್ನು ಹೊದೆಸಬೇಕು.



ಸುಡುತವನ್ನು ತಪ್ಪಿಸಲು ನಾವು ತೆಗೆದುಕೊಳ್ಳಬೇಕಾದ ಮುಂಜಾಗ್ರತೆಗಳು ಯಾವುವು? ಚರ್ಚಿಸಿ ಪರಿಸರಪುಸ್ತಕದಲ್ಲಿ ಬರೆಯುವಿರಲ್ಲವೇ?

## ಹಾವಿನ ಕಡಿತ

ಹಾವು ಕಚ್ಚಿದ ಒಬ್ಬ ವ್ಯಕ್ತಿಗೆ ನೀಡಬೇಕಾದ ಪ್ರಥಮ ಚಿಕಿತ್ಸೆ ಯಾವುದು?

- ಹಾವು ಕಚ್ಚಿದ ವ್ಯಕ್ತಿಯನ್ನು ಸಮಾಧಾನಪಡಿಸಬೇಕು.
- ಹಾವು ಕಚ್ಚಿದ ವ್ಯಕ್ತಿಯನ್ನು ಓಡಲು ಮತ್ತು ನಡೆಯಲು ಬಿಡಬಾರದು.
- ಕಚ್ಚಿದ ಭಾಗವನ್ನು ಶುಚಿಯಾಗಿ ತೊಳೆಯಬೇಕು.
- ಕಚ್ಚಿದ ಭಾಗವನ್ನು ಕೆಳತಗ್ಗಿಸಿ ಇಡಲು ಗಮನಿಸಬೇಕು.
- ಆದಷ್ಟು ಬೇಗನೆ ವೈದ್ಯರ ಸಹಾಯ ದೊರೆಯುವಂತೆ ಮಾಡಬೇಕು.



ಹಾವುಗಳಲ್ಲಿ ವಿಷವುಳ್ಳವುಗಳು ಮತ್ತು ವಿಷ ಇಲ್ಲದವುಗಳು ಇವೆ.

ಕಚ್ಚಿದ ಹಾವು ಯಾವುದೆಂದು ತಿಳಿದಿದ್ದರೆ ಚಿಕಿತ್ಸೆಯು ಸುಲಭವಾಗುವುದು.

ಹಾವಿನ ಕಡಿತಕ್ಕೊಳಗಾಗದಿರಲು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು ಯಾವುವೆಂದು ಬರೆಯಿರಿ.

## ನೀರಿನಲ್ಲಿ ಬಿದ್ದು ಉಂಟಾಗುವ ಅಪಘಾತಗಳು

ಈಜು ತಿಳಿದಿರುವುದು ನೀರಿನಲ್ಲಿ ಬಿದ್ದು ಉಂಟಾಗುವ ಅಪಘಾತಗಳನ್ನು ಕಡಿಮೆ ಮಾಡಲು ಸಹಾಯಕವಲ್ಲವೇ?



ಉದ್ದವಾದ ಹಗ್ಗವನ್ನೋ ವಸ್ತ್ರವನ್ನೋ ಮರದ ತುಂಡನ್ನೋ ನೀರಿಗೆ ಎಸೆದು ಕೊಟ್ಟು ಅಪಘಾತ ಸಂಭವಿಸಿದ ವ್ಯಕ್ತಿಯನ್ನು ದಡಕ್ಕೆ ಸೇರಿಸಲು ಪ್ರಯತ್ನಿಸಬಹುದು.

ನೀರಿನಲ್ಲಿ ಮುಳುಗಿದ ವ್ಯಕ್ತಿಯನ್ನು ರಕ್ಷಿಸಲು ಹೋಗುವಾಗ ಆತ್ಮರಕ್ಷಣೆಯನ್ನು ಗಮನಿಸಬೇಕು.



ಈಜು ತಿಳಿಯದಿದ್ದರೆ ನೀರಿಗೆ ಹಾರಬಾರದು.


ಸಹಾಯಕ್ಕಾಗಿ ಜನರನ್ನು ಕರೆಯುವಿರಲ್ಲವೇ?

## ವಿದ್ಯುದಾಘಾತ

ನಾವು ಹಲವಾರು ವಿದ್ಯುತ್ ಉಪಕರಣಗಳನ್ನು ಬಳಸುತ್ತೇವಲ್ಲವೇ? ಅವುಗಳನ್ನುಪಯೋಗಿಸುವಾಗ ಬಹಳಷ್ಟು ಎಚ್ಚರಿಕೆವಹಿಸಬೇಕು. ವಿದ್ಯುದಾಘಾತ ಸಂಭವಿಸಿದ ವ್ಯಕ್ತಿಯನ್ನು ರಕ್ಷಿಸಲು ನಾವು ಹೇಗೆ ಸಹಾಯ ಮಾಡಬಹುದು?

- ಸ್ವಿಚ್ ಆಫ್ ಮಾಡಿ ವಿದ್ಯುತ್ ಪ್ರವಾಹವನ್ನು ನಿಲ್ಲಿಸಬೇಕು. ವಿದ್ಯುತ್ ಪ್ರವಾಹವನ್ನು ನಿಲ್ಲಿಸಲು ಸಾಧ್ಯವಾಗದಿದ್ದರೆ ವಿದ್ಯುತ್ತನ್ನು ಹರಿಯಲು ಬಿಡದ ಕೈಕವಚ ಅಥವಾ ಒಣಗಿದ ಮರದ ತುಂಡನ್ನು ಉಪಯೋಗಿಸಿ ಅಪಘಾತಕ್ಕೊಳಗಾದ ವ್ಯಕ್ತಿಯನ್ನು ವಿದ್ಯುತ್ ಸಂಪರ್ಕದಿಂದ ಬೇರ್ಪಡಿಸಲು ಪ್ರಯತ್ನಿಸಬೇಕು.

  ಇತರ ಯಾವ ವಸ್ತುಗಳನ್ನು ಉಪಯೋಗಿಸಬಹುದು ? ಸಹಾಯ ಮಾಡುವ ವ್ಯಕ್ತಿಯ ಸುರಕ್ಷತೆಯು ಪ್ರಧಾನವಾಗಿದೆ.



ವಿದ್ಯುದಾಘಾತ ಸಂಭವಿಸದಿರಲು ಕೈಗೊಳ್ಳಬೇಕಾದ ಮುಂಜಾಗ್ರತೆಗಳು ಯಾವುವು? ಚರ್ಚಿಸಿ ಪರಿಸರ ಪುಸ್ತಕದಲ್ಲಿ ಬರೆಯಿರಿ.

## ಪ್ರಥಮ ಚಿಕಿತ್ಸಾ ಪೆಟ್ಟಿಗೆ

ಪ್ರಥಮ ಚಿಕಿತ್ಸೆಗೆ ಅಗತ್ಯವಾದ ಸಾಮಗ್ರಿಗಳು ಯಾವುವು?

ಈ ರೀತಿಯ ಸಾಮಗ್ರಿಗಳನ್ನೊಳಗೊಂಡ ಪ್ರಥಮ ಚಿಕಿತ್ಸಾ ಪೆಟ್ಟಿಗೆ ಶಾಲೆಯಲ್ಲೂ ಮನೆಯಲ್ಲೂ ಇದೆಯಲ್ಲವೇ. ಪರಿಶೀಲಿಸಿ ನೋಡಿರಿ.

ನಾವೊಂದು ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ತಯಾರಿಸೋಣ.



ಒಳಗೊಂಡಿರಬೇಕಾದ ವಸ್ತುಗಳು ಯಾವುವು?

- ರೋಗಾಣುನಾಶಕ
- ಹತ್ತಿ
- ಬ್ಯಾಂಡೇಜ್
- 
- 





**ಪ್ರಥಮ ಚಿಕಿತ್ಸಾ ದಿನ**

ಪ್ರಥಮ ಚಿಕಿತ್ಸೆಯ ಮಹತ್ವವನ್ನು ತಿಳಿಸುವುದಕ್ಕಾಗಿ ಪ್ರತಿ ವರ್ಷ ಸೆಪ್ಟಂಬರಿನ ಎರಡನೇ ಶನಿವಾರವನ್ನು ಪ್ರಥಮ ಚಿಕಿತ್ಸಾ ದಿನವಾಗಿ ಆಚರಿಸಲಾಗುವುದು.

ಅಪಘಾತಗಳು ಯಾರಿಗೂ ಯಾವಾಗ ಬೇಕಾದರೂ ಸಂಭವಿಸಬಹುದು. ಪ್ರಥಮ ಚಿಕಿತ್ಸೆಯು ಅಮೂಲ್ಯವಾದ ಮನುಷ್ಯ ಜೀವವನ್ನು ರಕ್ಷಿಸಲು ಸಹಾಯ ಮಾಡುತ್ತದೆ.

*ಪ್ರಥಮ ಚಿಕಿತ್ಸೆ ನಮ್ಮ ಕರ್ತವ್ಯ*



## ಕಲಿಕೆಯ ಪ್ರಧಾನ ಸಾಧನೆಗಳು

- ಅಪಘಾತ ಸಂಭವಿಸಬಹುದಾದ ಸಂದರ್ಭಗಳನ್ನು ತಿಳಿದುಕೊಂಡು ಪಟ್ಟಿ ಮಾಡುತ್ತಾರೆ.
- ಪ್ರಥಮ ಚಿಕಿತ್ಸೆಯ ಮಹತ್ವವನ್ನು ತಿಳಿದುಕೊಂಡು ಹೇಳುತ್ತಾರೆ.
- ಪ್ರಥಮ ಚಿಕಿತ್ಸೆ ಏನೆಂಬುದನ್ನು ನಿರ್ವಚಿಸುತ್ತಾರೆ.
- ಪ್ರತಿಯೊಂದು ಅಪಘಾತದಲ್ಲೂ ನೀಡಬೇಕಾದ ಪ್ರಥಮ ಚಿಕಿತ್ಸೆ ಯಾವುದೆಂಬುದನ್ನು ವಿವರಿಸುತ್ತಾರೆ.
- ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಕ್ರಮೀಕರಿಸಿ, ಬೇಕಾದ ರೀತಿಯಲ್ಲಿ ಅದರ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ.



## ಮೌಲ್ಯಮಾಪನ ಮಾಡೋಣ

1. ಅಮಿತ ರಕ್ತಸ್ರಾವವಾಗುತ್ತಿರುವ ಗಾಯದ ಮೇಲ್ಭಾಗದಲ್ಲಿ ಒತ್ತಿ ಹಿಡಿಯುವುದು ಯಾಕೆ?

   a. ನೋವು ಕಡಿಮೆಯಾಗಲು.

   b. ರೋಗಾಣುಗಳನ್ನು ತಡೆಯಲು.

   c. ರಕ್ತಸ್ರಾವವನ್ನು ಕಡಿಮೆಗೊಳಿಸಲು.

2. ಕೈ ಸುಟ್ಟುಹೋದ ತಕ್ಷಣ

   a. ಐಸ್ ಇಡಬೇಕು.

   b. ಟೂತ್‌ಪೇಸ್ಟ್ ಹಚ್ಚಬೇಕು.

   c. ತಣ್ಣೀರನ್ನು ಎರೆಯಬೇಕು.



## ಮುಂದುವರಿದ ಚಟುವಟಿಕೆಗಳು

1. ಆರೋಗ್ಯಕಾರ್ಯಕರ್ತರ ನೇತೃತ್ವದಲ್ಲಿ ಪ್ರಥಮ ಚಿಕಿತ್ಸಾ ತರಬೇತಿ ತರಗತಿಯನ್ನು ಆಯೋಜಿಸಿರಿ.
2. ಪ್ರಥಮ ಚಿಕಿತ್ಸೆಯ ಮಹತ್ವ, ವಿಧಾನ ಎಂಬಿವುಗಳನ್ನು ವ್ಯಕ್ತಪಡಿಸುವ ಪ್ರಥಮ ಚಿಕಿತ್ಸಾ ಚಾರ್ಟು, ಪೋಸ್ಟರು ಇತ್ಯಾದಿಗಳನ್ನು ತಯಾರಿಸಿ ಪ್ರದರ್ಶಿಸಿರಿ.
3. ಅಪಘಾತಗಳಿಗೆ ಸಂಬಂಧಿಸಿದ ಹಲವು ಪತ್ರಿಕಾ ವರದಿಗಳನ್ನು ಸಂಗ್ರಹಿಸಿ, 'ಪ್ರಥಮ ಚಿಕಿತ್ಸಾ ಸಂಚಿಕೆ'ಯನ್ನು ತಯಾರಿಸಿರಿ.
4. ಪ್ರಥಮ ಚಿಕಿತ್ಸಾ ದಿನಾಚರಣೆಯ ಅಂಗವಾಗಿ ಪ್ರಥಮ ಚಿಕಿತ್ಸೆಯ ಮಹತ್ವವನ್ನು ತಿಳಿಯಪಡಿಸುವ ಕಿರುನಾಟಕವನ್ನು ಅಭಿನಯಿಸಿರಿ.
5. ಪ್ರಥಮ ಚಿಕಿತ್ಸೆಗೆ ಸಂಬಂಧಿಸಿದ ಚಿತ್ರಗಳು, ವೀಡಿಯೋ ಮತ್ತು ಮಾಹಿತಿಗಳನ್ನು ಸಂಗ್ರಹಿಸಿರಿ.





# 12 ನಾಡನ್ನು ಅರಿಯಲು

*ಹಿಂದಿನ ಕತೆಗಳನ್ನು ಕೇಳುವುದೆಂದರೆ ಅನುವಿಗೆ ತುಂಬ ಇಷ್ಟ. ರಾತ್ರಿಯೂಟದ ಬಳಿಕ ಎಂದಿನಂತೆ ಅಜ್ಜಿ ಹೇಳತೊಡಗಿದರು...*

*“ಮಗೂ, ಹಿಂದಿನ ಕಾಲದಲ್ಲಿ ನಮ್ಮ ಗ್ರಾಮವು ಇಂದಿನಂತೆ ಇರಲಿಲ್ಲ. ಮಡಲು ಹೊದೆಸಿ, ಸೆಗಣಿ ಸಾರಿಸಿದ ಮನೆಗಳು. ಚಿಮಿಣಿ ಎಣ್ಣೆಯ ದೀಪದ ಮಂದ ಬೆಳಕು ಮಾತ್ರವಿರುವ ರಾತ್ರಿಗಳು. ಸಿಕ್ಕ, ಒರಳು, ಮಣ್ಣಿನ ಮಡಿಕೆ ಹಾಗೂ ಮಣ್ಣಿನ ಪಾತ್ರೆಗಳೆಲ್ಲ ಇರುವ ಅಡುಗೆ ಕೋಣೆ. ಶಾಲೆಗೆ ಹೋಗುವವರಾದರೂ ಬಹಳ ಕಡಿಮೆ... ಅದು ಹೇಗೆ? ಬಹಳಷ್ಟು ದೂರ ನಡೆದು ನಡೆದು ಮಕ್ಕಳು ದಣಿದು ಬಿಡುವರು. ಸಾಮಗ್ರಿಗಳನ್ನು ಹೊತ್ತುಕೊಂಡು ಹೋಗುವವರ ವಿಚಾರ ಅದಕ್ಕಿಂತಲು ಕಷ್ಟ. ರಸ್ತೆಗಳಿಲ್ಲದ ಆ ಕಾಲದಲ್ಲಿ ಕಾಲುದಾರಿಯಾಗಿ ತಲೆಹೊರೆಯೊಂದಿಗೆ ಅವರು ಹೆಜ್ಜೆ ಇಡುವರು. ದಾರಿಯ ಬದಿಯಲ್ಲಿ ಹೊರೆಗಲ್ಲು ಇರುವುದು ಒಂದಿಷ್ಟು ಸಮಾಧಾನ.*

*ಈಗ ನಮ್ಮ ಊರು ಎಷ್ಟೊಂದು ಬದಲಾಗಿದೆ!*





ಅಜ್ಜಿ ಹೇಳಿದ ಈ ಊರಿನ ಕತೆಯನ್ನು ಕೇಳಿದಿರಲ್ಲವೇ.

ನಿಮ್ಮ ಊರಿನ ಹೆಸರೇನು?

ಇಂತಹ ಒಂದು ಚರಿತ್ರೆ ನಿಮ್ಮ ಊರಿಗೂ ಇರಬಹುದಲ್ಲವೇ?

ಅದನ್ನು ಹೇಗೆ ತಿಳಿದುಕೊಳ್ಳಬಹುದು?

ಯಾರಲ್ಲಿ ಕೇಳಬಹುದು?
ಅಜ್ಜಿಯಲ್ಲಿ ಅಥವಾ ಹಿರಿಯರಲ್ಲಿ ಕೇಳಿ ತಿಳಿಯಬಹುದಲ್ಲವೇ?


ಕೇಳಬೇಕಾದುದೇನು?



- ಅಂದಿನ ಕೃಷಿ
- ಕಸುಬುಗಳು
- ಆಹಾರ
- ಗೃಹೋಪಕರಣಗಳು
- ಆರಾಧನಾಲಯಗಳು
- ಆಚರಣೆಗಳು
- ಸಾರ್ವಜನಿಕ ಸಂಸ್ಥೆಗಳು
-


ಪ್ರತಿಯೊಂದು ಊರಿಗೂ ಅದರದ್ದೇ ಆದ ಚರಿತ್ರೆ ಇದೆ.

ಊರಿನ ಕಥೆಯನ್ನು ತಿಳಿಯಲು ಪ್ರಯತ್ನಿಸಿದಾಗ ನೀವು ಚಿತ್ರದಲ್ಲಿ ಕಾಣುವಂತಹ ಯಾವುದಾದರೂ ವಸ್ತುಗಳನ್ನು ಕಂಡಿರುವಿರಾ?
ಅದನ್ನು ಬರೆಯುವಿರಲ್ಲವೇ?



ಊರಿನ ಚರಿತ್ರೆಯನ್ನು ನೆನಪಿಸುವ ಕೆಲವು ಕುರುಹುಗಳು ಇಂದಿಗೂ ಬಾಕಿ ಇವೆ. ಅವುಗಳನ್ನು ನಾವು ಸಂರಕ್ಷಿಸಬೇಕು.

# ನನ್ನ ಊರು ಇಂದು




ನನ್ನ ಊರಿಗೆ ಹಿಂದಿಗಿಂತ ಹಲವಾರು ಬದಲಾವಣೆಗಳು ಉಂಟಾಗಿವೆ.

ಬದಲಾವಣೆಗಳು ಉಂಟಾದ ಕ್ಷೇತ್ರಗಳು ಯಾವುವು?

ನಾವೊಮ್ಮೆ ಅನ್ವೇಷಣೆ ಮಾಡೋಣ.

| ನನ್ನ ಊರು | ಅಂದು | ಇಂದು |
|---|---|---|
| ಕೃಷಿ | | |
| ವೃತ್ತಿ | | |
| ಆಟಗಳು | | |
| ಸಾರಿಗೆ ಸೌಕರ್ಯಗಳು | | |
| ಸಾರ್ವಜನಿಕ ಸಂಸ್ಥೆಗಳು | | |
| | | |



ಜನರ ಅಗತ್ಯಗಳಿಗೆ ಹೊಂದಿಕೊಂಡು ಬದಲಾವಣೆಗಳು ಉಂಟಾಗಿವೆ.
ಊರಿನಲ್ಲಿ ಉಂಟಾಗುವ ಬದಲಾವಣೆಗಳು ಜನರ ಜೀವನವು ಅಭಿವೃದ್ಧಿಯಾಗಲು ಕಾರಣವಾಗಿವೆ.

ಅಗತ್ಯಗಳಿಗನುಸಾರವಾಗಿ ಬದಲಾವಣೆಗಳು ಸಂಭವಿಸುತ್ತಲೇ ಇರುತ್ತವೆ.



ಊರಿನಲ್ಲಿ ಉಂಟಾದ ಎಲ್ಲಾ ಬದಲಾವಣೆಗಳು ಅಭಿವೃದ್ಧಿಯತ್ತ ಸಾಗಿವೆಯೇ? ಪರಿಶೀಲಿಸಿರಿ.

ಒಂದು ಊರಿನ ಜನರ ಸಾರ್ವಜನಿಕ ಬೇಡಿಕೆಗಳನ್ನು ಈಡೇರಿಸಲಿರುವ ಜವಾಬ್ದಾರಿಯು ಯಾರದ್ದಾಗಿರುವುದೆಂದು ತಿಳಿದಿದೆಯೇ?

ಒಂದು ಪ್ರದೇಶದ ಜನರ ಸಾರ್ವಜನಿಕ ಬೇಡಿಕೆಗಳನ್ನು ಇಂದು ನೆರವೇರಿಸುವುದು ಸ್ಥಳೀಯ ಆಡಳಿತ ಸಂಸ್ಥೆಗಳಾಗಿವೆ. ಸ್ಥಳೀಯ ಆಡಳಿತ ಸಂಸ್ಥೆಗಳಿಗಿರುವ ಜನಪ್ರತಿನಿಧಿಗಳನ್ನು ಚುನಾಯಿಸುವುದು ಆಯಾ ಪ್ರದೇಶದ ಜನರಾಗಿರುವರು. ಚುನಾವಣೆಯ ಮೂಲಕ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗುವುದು.





ಸ್ಥಳೀಯ ಆಡಳಿತ ಸಂಸ್ಥೆಗಳು ಯಾವುವು?

ಗ್ರಾಮಪಂಚಾಯತು, ಮುನ್ಸಿಪಾಲಿಟಿ ಮತ್ತು ಕಾರ್ಪೊರೇಶನುಗಳು ಸ್ಥಳೀಯ ಆಡಳಿತ ಸಂಸ್ಥೆಗಳಾಗಿವೆ.

ನೀವು ವಾಸಿಸುವ ಪ್ರದೇಶಕ್ಕೆ ✔ ಗುರುತು ಹಾಕಿರಿ.

| | |
|---|---|
| ಗ್ರಾಮಪಂಚಾಯತು | |
| ಮುನ್ಸಿಪಾಲಿಟಿ | |
| ಕಾರ್ಪೊರೇಶನ್ | |

## ಹೆಸರಿಸಿರಿ

ಗ್ರಾಮಪಂಚಾಯತಿನ ಮುಖಂಡ ಪಂಚಾಯತ್ ಅಧ್ಯಕ್ಷ ಆಗಿರುವರು. ಮುನ್ಸಿಪಲ್ ಚೆಯರ್‌ಮೇನ್ ಮುನ್ಸಿಪಾಲಿಟಿಯ ಮುಖಂಡರಾಗಿರುವರು. ಮೇಯರ್ ಕಾರ್ಪೊರೇಶನಿನ ಆಡಳಿತಾಧಿಕಾರಿಯಾಗಿರುವರು. ಪ್ರತಿಯೊಂದು ವಾರ್ಡಿನಿಂದ ಅಥವಾ ಡಿವಿಶನಿನಿಂದ ಚುನಾಯಿತರಾದ ಜನಪ್ರತಿನಿಧಿಗಳು ಆಡಳಿತಾಧಿಕಾರಿಗಳನ್ನು ಆಯ್ಕೆ ಮಾಡುವರು.

ಕೇರಳದಲ್ಲಿ ತ್ರಿಸ್ತರ ಪಂಚಾಯತ್ ವ್ಯವಸ್ಥೆಯಿದೆ. ಅವುಗಳು ಗ್ರಾಮಪಂಚಾಯತು, ಬ್ಲೋಕ್ ಪಂಚಾಯತು ಮತ್ತು ಜಿಲ್ಲಾ ಪಂಚಾಯತುಗಳಾಗಿವೆ.

ನಗರ ಪ್ರದೇಶಗಳು ಮುನ್ಸಿಪಾಲಿಟಿ ಅಥವಾ ಕಾರ್ಪೊರೇಶನ್ ಆಗಿರುವುದು.

**ಹೆಸರುಗಳನ್ನು ತಿಳಿದು ಬರೆಯಿರಿ**


| | |
|---|---|
| ನನ್ನ ಗ್ರಾಮಪಂಚಾಯತು / ಮುನ್ಸಿಪಾಲಿಟಿ / ಕಾರ್ಪೊರೇಶನ್ | |
| ನನ್ನ ಬ್ಲಾಕ್ ಪಂಚಾಯತು | |
| ನನ್ನ ಜಿಲ್ಲಾ ಪಂಚಾಯತು | |

ಗ್ರಾಮಪಂಚಾಯತ್ ಸದಸ್ಯರನ್ನು ವಾರ್ಡ್ ಮೆಂಬರ್ ಎಂದೂ ಮುನ್ಸಿಪಾಲಿಟಿ – ಕಾರ್ಪೊರೇಶನ್ ಸದಸ್ಯರನ್ನು ಕೌನ್ಸಿಲರ್ ಎಂದೂ ಕರೆಯಲಾಗುವುದು.

ನಿಮ್ಮ ವಾರ್ಡ್ ಪ್ರತಿನಿಧಿ / ಕೌನ್ಸಿಲರ್ ಯಾರು?

ನಿಮ್ಮ ಶಾಲೆಯ ಪ್ರಧಾನ ಸಮಾರಂಭಗಳಲ್ಲಿ ಅವರು ಭಾಗವಹಿಸುವರಲ್ಲವೇ?

## ಗ್ರಾಮಸಭೆಗೆ



ಸಂಭಾಷಣೆಯನ್ನು ಗಮನಿಸಿದಿರಲ್ಲವೇ.

ಗ್ರಾಮಸಭೆಯಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳಬೇಕೆಂದು ಹೇಳುವುದು ಯಾಕೆ?


ಊರಿನ ಜನರು ಒಟ್ಟು ಸೇರಿ ಆ ಊರಿನ ಅಭಿವೃದ್ಧಿಗೆ ಅಗತ್ಯವಾದ ವಿಷಯಗಳನ್ನು ಚರ್ಚಿಸಿ ನಿರ್ದೇಶಿಸುವುದೇ ಗ್ರಾಮಸಭೆ.

## ಶಾಲೆ ಒಂದು ಸಾರ್ವಜನಿಕ ಸಂಸ್ಥೆ


ನೀವು ಕಲಿಯುವ ಶಾಲೆ ಒಂದು ಸಾರ್ವಜನಿಕ ಸಂಸ್ಥೆಯಾಗಿದೆ. ನಿಮಗೆ ಕಲಿತು ಸಂಪನ್ನರಾಗಲು ಶಾಲೆಯಿಂದ ಲಭಿಸುವ ಸೌಕರ್ಯಗಳು ಮತ್ತು ಸೇವೆಗಳು ಯಾವುವು?

- ಪಾಠಪುಸ್ತಕ
- ಸ್ಕಾಲರ್‌ಶಿಪ್‌ಗಳು
- 

ವಿದ್ಯಾಭ್ಯಾಸ ನಮ್ಮ ಹಕ್ಕಾಗಿದೆ. ಆ ಹಕ್ಕನ್ನು ಒದಗಿಸುವುದು ಸಾರ್ವಜನಿಕ ವಿದ್ಯಾಲಯಗಳಾಗಿವೆ.



ನಮಗೆ ಸೇವೆಗಳನ್ನು ನೀಡುವ ಇತರ ಸಾರ್ವಜನಿಕ ಸಂಸ್ಥೆಗಳು ಯಾವುವು?













ನಿಮ್ಮ ಊರಿನಲ್ಲಿರುವ ಸಾರ್ವಜನಿಕ ಸಂಸ್ಥೆಗಳು ಯಾವುವು?

ಜನತೆಯ ಅಗತ್ಯಗಳನ್ನು ಈಡೇರಿಸಲು ಸೇವೆ ಸಲ್ಲಿಸುವ ಸಂಸ್ಥೆಗಳೇ ಸಾರ್ವಜನಿಕ ಸಂಸ್ಥೆಗಳು.

ಸಾರ್ವಜನಿಕ ಸಂಸ್ಥೆಗಳು ಒದಗಿಸುವ ಸೇವೆಗಳನ್ನು ಪಟ್ಟಿ ಮಾಡಿರಿ.

| ಸಂಸ್ಥೆಗಳು | ಸೇವೆಗಳು |
|---|---|
| ಪೋಲೀಸ್ ಸ್ಟೇಶನ್ | ಶಾಂತಿ ಕಾಪಾಡುವುದು. ಸೊತ್ತಿಗೂ ಜೀವಕ್ಕೂ ಸಂರಕ್ಷಣೆ ನೀಡುವುದು. |
| | |
| | |
| | |
| | |
| | |

## ಒಂದಾಗಿ ಒಂದು ಉತ್ತಮ ನಾಳೆಗೆ

ಸ್ಥಳೀಯಾಡಳಿತ ಸಂಸ್ಥೆಗಳ ಮತ್ತು ಸಾರ್ವಜನಿಕ ಸಂಸ್ಥೆಗಳ ಪರಿಚಯವಾಯಿತಲ್ಲವೇ? ಇವುಗಳಲ್ಲದೆ ಊರಿನ ಒಳಿತಿಗಾಗಿ ಕಾರ್ಯವೆಸಗುವ ಇತರ ಸಂಸ್ಥೆಗಳು ಮತ್ತು ಸಂಘಗಳಿವೆ.

- ವಾಚನಾಲಯ
- ಕ್ಲಬ್ಬುಗಳು
- ಕುಟುಂಬಶ್ರೀ

ನಿಮ್ಮ ಊರಿನಲ್ಲಿರುವ ಇತರ ಸಂಘಗಳು ಯಾವುವು?

ನಮಗೆ ಹೆಮ್ಮೆಪಡಬಹುದಾದ ಹಲವಾರು ವಿಚಾರಗಳು ಊರಿಗಿದೆ. ನಮ್ಮ ಊರಿನ ಅಭಿವೃದ್ಧಿಗೆ ಕಾರಣ ಜನರ ಒಗ್ಗಟ್ಟಾಗಿದೆ. ನಮ್ಮ ಐಕ್ಯವೇ ಊರಿನ ಶಕ್ತಿ.



## ಕಲಿಕೆಯ ಪ್ರಧಾನ ಸಾಧನೆಗಳು

- ನಮ್ಮ ಊರಿಗೆ ಒಂದು ಚರಿತ್ರೆ ಇದೆಯೆಂದು ಕಂಡುಕೊಳ್ಳುವರು, ಬರೆಯುವರು.
- ಚರಿತ್ರೆಯನ್ನು ಸೂಚಿಸುವ ಕುರುಹುಗಳನ್ನು ತಿಳಿದುಕೊಂಡು ವಿವರಿಸುವರು.
- ನಮ್ಮ ಊರಿನಲ್ಲಿ ಹಲವಾರು ಬದಲಾವಣೆಗಳುಂಟಾಗಿವೆ ಎಂದು ತಿಳಿದುಕೊಂಡು ವಿವರಿಸುವರು.
- ಊರಿನ ಜನರ ಅಗತ್ಯಗಳಿಗನುಸಾರವಾಗಿ ಅಭಿವೃದ್ಧಿ ಉಂಟಾಯಿತೆಂದು ತಿಳಿದುಕೊಂಡು ವಿವರಿಸುವರು.
- ಊರಿಗೆ ಅದರದ್ದೇ ಆದ ಆಡಳಿತ ವ್ಯವಸ್ಥೆ ಇದೆಯೆಂದೂ, ಜನರ ಅಗತ್ಯಗಳನ್ನು ಈಡೇರಿಸುವುದು ಆಡಳಿತ ಸಂಸ್ಥೆಗಳಾಗಿವೆಯೆಂದೂ ತಿಳಿದುಕೊಂಡು ಹೇಳುತ್ತಾರೆ.
- ಗ್ರಾಮಪಂಚಾಯತು, ಮುನ್ಸಿಪಾಲಿಟಿ, ಕಾರ್ಪೊರೇಶನ್ ಎಂಬಿವುಗಳು ಸ್ಥಳೀಯಾಡಳಿತ ಸಂಸ್ಥೆಗಳಾಗಿವೆ. ಗ್ರಾಮಪಂಚಾಯತು, ಬ್ಲೋಕ್ ಪಂಚಾಯತು ಮತ್ತು ಜಿಲ್ಲಾ ಪಂಚಾಯತುಗಳು ತ್ರಿಸ್ತರ ಪಂಚಾಯತ್ ವ್ಯವಸ್ಥೆಗಳಾಗಿವೆಯೆಂದು ವಿವರಿಸುತ್ತಾರೆ.
- ಸಾರ್ವಜನಿಕ ಸಂಸ್ಥೆಗಳ ಕುರಿತು ಹಾಗೂ ಅವುಗಳು ನೀಡುವ ಸೇವೆಗಳ ಕುರಿತು ವಿವರಿಸುತ್ತಾರೆ.



## ಮೌಲ್ಯಮಾಪನ ಮಾಡೋಣ

1. ಜೊತೆಗೊಳಿಸಿರಿ.

| ಸ್ಥಳೀಯಾಡಳಿತ ಸಂಸ್ಥೆ | ಆಯ್ಕೆಗೊಂಡ ಆಡಳಿತ ಮುಖಂಡ |
|---|---|
| ಗ್ರಾಮಪಂಚಾಯತು | ಚೆಯರ್‌ಮೇನ್ |
| ಮುನ್ಸಿಪಾಲಿಟಿ | ಮೇಯರ್ |
| ಕಾರ್ಪೊರೇಶನ್ | ಪ್ರೆಸಿಡೆಂಟ್ |

2. ಊರಿನ ಸಾರ್ವಜನಿಕ ಸಂಸ್ಥೆಗಳು ಮತ್ತು ಅವುಗಳಿಂದ ಲಭಿಸುವ ಸೇವೆಗಳ ಕುರಿತು ಟಿಪ್ಪಣಿ ತಯಾರಿಸಿರಿ.

3. ನಾಡಿನ ಸಾರ್ವಜನಿಕ ಅಗತ್ಯಗಳನ್ನು ಈಡೇರಿಸುವುದು ಯಾವ ಸಂಸ್ಥೆಯ ಜವಾಬ್ದಾರಿಯಾಗಿದೆ?

   (a) ಪೋಲೀಸ್ ಸ್ಟೇಷನ್ (b) ವಿಲ್ಲೇಜ್ ಆಫೀಸು (c) ಗ್ರಾಮಪಂಚಾಯತು

4. ಗ್ರಾಮಪಂಚಾಯತ್‌ನ ಮುಖ್ಯಸ್ಥ.

   (a) ಪಂಚಾಯತ್ ಸೆಕ್ರೆಟರಿ (b) ವಾರ್ಡ್ ಮೆಂಬರ್ (c) ಪಂಚಾಯತ್ ಪ್ರೆಸಿಡೆಂಟ್

5. ಒಂದು ವಾರ್ಡಿನ ಅಭಿವೃದ್ಧಿ ಕಾರ್ಯಗಳನ್ನು ಚರ್ಚಿಸಿ ತೀರ್ಮಾನಿಸುವುದಕ್ಕಾಗಿ ಅಲ್ಲಿನ ಜನರು ಸೇರುವುದಾಗಿದೆ...

   (a) ಕುಟುಂಬಶ್ರೀ (b) ಗ್ರಾಮಸಭೆ (c) ನೆರೆಹೊರೆಕೂಟ



## ಮುಂದುವರಿದ ಚಟುವಟಿಕೆಗಳು

- ಸಾಮಾಜಿಕ ಕಾರ್ಯಕರ್ತರೊಂದಿಗೆ ಸಂದರ್ಶನ
- ಸಾರ್ವಜನಿಕ ಸಂಸ್ಥೆ ಸಂದರ್ಶನ
- ಊರಿನ ಚರಿತ್ರೆ – ಸಂಚಿಕೆ
- ಮನೆಯವರೊಂದಿಗೆ ಗ್ರಾಮಸಭೆಯನ್ನು ಸಂದರ್ಶಿಸಿರಿ.
- ನಿಮ್ಮ ಊರಿನ ಬಗ್ಗೆ ಹಳೆಯ ವಿಚಾರಗಳನ್ನು ತಿಳಿದುಕೊಳ್ಳಲು ಊರಿನ ಹಿರಿಯ ವ್ಯಕ್ತಿಗಳೊಡನೆ ಸಂದರ್ಶನ ನಡೆಸಿರಿ.
- ವಾಚನಾಲಯವನ್ನು ಸಂದರ್ಶಿಸಿ ವರದಿ ತಯಾರಿಸಿರಿ.